೩೯೭

ಉತ್ತರ ಕನ್ನಡ ಜನಪದ ಕಲೆ

ಗೋಪಾಲಕೃಷ್ಣ ಪಿ. ನಾಯಕ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಅಕ್ಟೋಬರ, ೧೯೮೮

೩೯೭

ಉತ್ತರ ಕನ್ನಡ ಜನಪದ ಕಲೆ

ಶ್ರೀ ಗೋಪಾಲಕೃಷ್ಣ ಪಿ. ನಾಯಕ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಅಕ್ಟೋಬರ, ೧೯೮೮

ಪ್ರಕಾಶಕರು :

ಎಸ್. ಬಿ. ನಾಯಕ್
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಅಕ್ಟೋಬರ, ೧೯೮೮

ಬೆಲೆ : ರೂ. ೧—೦೦

ಮುದ್ರಕರು :

ರಾಜಶ್ರೀ ಪ್ರಿಂಟಿಂಗ ಪ್ರೆಸ್
ತಡಕೋಡ ಗಲ್ಲಿ, ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ ಉಪನ್ಯಾಸ ಗ್ರಂಥಮಾಲೆ ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೋ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನವಿಟ್ಟು ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೬೬ ಪುಸ್ತಿಕೆಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರ ಬಂದೊಡನೆ ಅವುಗಳ ಸಾವಿ ರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜಿ. ಕೆ. ನಾರಾಯಣ ರೆಡ್ಡಿ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯವು ಜ್ಞಾನಪ್ರಸಾರದ ಹರವನ್ನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತಗೊಳಿಸದೇ ತನ್ನ ಪ್ರಸಾರಾಂಗದ ಮೂಲಕ ಗ್ರಾಮೀಣ ಭಾಗದಲ್ಲಿ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಿ ಜ್ಞಾನದೀಪಿಗೆಯನ್ನು ಹಳ್ಳಿಯ ಮನೆಮನೆಗೆ ಮುಟ್ಟಿಸುತ್ತಿರುವದು ಮತ್ತು ಇವುಗಳಲ್ಲಿಯ ಉತ್ತಮ ಉಪನ್ಯಾಸಗಳನ್ನು ಪುಸ್ತಿಕೆ ರೂಪದಲ್ಲಿ ಪ್ರಕಟಿಸಿ ಪ್ರಚಾರಗೊಳಿಸುತ್ತಿರುವದು ಸ್ತುತ್ಯ-ಕಾರ್ಯವಾಗಿದೆ.

ವಿಶ್ವವಿದ್ಯಾಲಯದ ಪ್ರಸಾರಾಂಗವು ಏರ್ಪಡಿಸಿದ ೩೪ನೇ ಉಪನ್ಯಾಸ ಶಿಬಿರವು ಉತ್ತರಕನ್ನಡ ಜಿಲ್ಲೆಯ ಸರಕುಳಿ ಗ್ರಾಮದಲ್ಲಿ ೧೯೮೫ರ ಮಾರ್ಚ ೧೨ ಮತ್ತು ೧೩ ರಂದು ಜರುಗಿತು. ಅಂದಿನ ಉಪನ್ಯಾಸ ಮಾಲಿಕೆಯಲ್ಲಿ "ಉತ್ತರಕನ್ನಡ ಜನಪದ ಕಲೆಗಳು" ಎಂಬ ವಿಷಯದ ಮೇಲೆ ಉಪನ್ಯಾಸ ಗೈಯಲು ವಿಶ್ವವಿದ್ಯಾಲಯದವರು ನನಗೆ ಅವಕಾಶವನ್ನು ಒದಗಿಸಿದರು. ಉತ್ತರ-ಕನ್ನಡ ಜನಪದ ಕಲೆಗಳ ಕುರಿತು ಪರ್ಯಾಲೋಚಿಸಲು ಪ್ರೇರೇಪಿಸಿದ ಪ್ರಸಾರಾಂಗದ ಅಧಿಕಾರ ವರ್ಗಕ್ಕೆ ನನ್ನ ಕೃತಜ್ಞತೆಗಳು.

ಕನ್ನಡ ನಾಡಿನಲ್ಲಿ ಹೆಚ್ಚಿನ ನೈಸರ್ಗಿಕ ಸಂಪತ್ತನ್ನು ಮತ್ತು ವಿಶೇಷ ಸಾಂಸ್ಕೃತಿಕ ಸಂಪತ್ತನ್ನು ಪಡೆದ ಜಿಲ್ಲೆಯೆಂದರೆ ಉತ್ತರಕನ್ನಡ. ಇಲ್ಲಿಯ ಜನರ ನಡೆ-ನುಡಿ-ಜೀವನಕ್ರಮ ಎಲ್ಲವೂ ವೈವಿಧ್ಯಮಯ. ಹಲವಾರು ಬಗೆಯ ಜನಪದ ಕಲೆಗಳು ಇಲ್ಲಿವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನೆ ಆಯ್ದು ಈ

ಪುಸ್ತಿಕೆಯಲ್ಲಿ ಪರಿಚಯಿಸಲಾಗಿದೆ. ಹಲವಾರು ಶತಮಾನಗಳಿಂದ ಈ ಜಿಲ್ಲೆಯಲ್ಲಿ ನೆಲೆಸಿರುವ ನವಾಯತರ, ಮಾಪಿಳ್ಳೆಗಳ ಹಾಗೂ ಇದೇ ಶತಮಾನದಲ್ಲಿ ಈ ನೆಲದಲ್ಲಿ ಬಂದು ನೆಲೆಯೂರಿರುವ ಟಿಬೇಟಿಯನ್ನರ ಜನಪದ ಕಲೆಗಳ ಪರಿಚಯ ಮಾಡಿ-ಕೊಳ್ಳಲು ಇದುವರೆಗೂ ಈ ಲೇಖಕನಿಗೆ ಸಾಧ್ಯವಾಗಿಲ್ಲ. ಆದರಿಂದ ಆ ಜನಾಂಗದವರ ಜನಪದ ಕಲೆಗಳನ್ನು ಈ ಪುಸ್ತಿಕೆ-ಯಲ್ಲಿ ಸೇರಿಸಿಲ್ಲ; ಅವುಗಳ ಕುರಿತು ಅರಿಯುವದು ಅವಶ್ಯವಾಗಿದೆ.

ಇಲ್ಲಿಯ ಕಾಡಿನ ಒಳಹೊಕ್ಕು ಶೋಧಿಸುತ್ತ ಹೋದಂತೆ ಅನೇಕಾನೇಕ ಖಗ, ಮೃಗ ಸಸ್ಯ ಸಂಕುಲಗಳು ಗೋಚರಿಸುವಂತೆ ಇಲ್ಲಿಯ ಜಾನಪದ ಜಗತ್ತಿನಲ್ಲಿಯೂ ಅರಸುತ್ತ ಹೋದರೆ ಅನೇಕ ಅದ್ವಿತೀಯ ಜನಪದ ಕಲಾ ವೈಶಿಷ್ಟಗಳನ್ನು ಕಂಡು ನಲಿಯಬಹುದು.

ಈ ಪುಸ್ತಕವನ್ನು ಬರೆಯಲು ಸೌಜನ್ಯದಿಂದ ಪ್ರೋತ್ಸಾ-ಹಿಸಿದ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರೂ ನನ್ನ ಸನ್ಮಿತ್ರರೂ ಆದ ಶ್ರೀ ಎಸ್. ಬಿ. ನಾಯಕರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಅಂದಿನ ಉಪನ್ಯಾಸ ಶಿಬಿರವು ಅಚ್ಚು-ಕಟ್ಟಾಗಿ ನಡೆಯುವಂತೆ ನೋಡಿಕೊಂಡು ನಮ್ಮೆಲ್ಲರನ್ನು ಆತ್ಮೀಯವಾಗಿ ಆದರಾತಿಥ್ಯದಿಂದ ಸತ್ಕರಿಸಿದ ಸರಕುಳಿಯ ಜಗದಂಬಾ ಹೈಸ್ಕೂಲಿನ ಮುಖ್ಯಾಧ್ಯಾಪಕರೂ ನನ್ನ ಸ್ನೇಹಿತರೂ ಆದ ಶ್ರೀ ಎಂ. ಎಂ. ಹೆಗಡೆ ಇವರಿಗೆ ನನ್ನ ಅಭಿನಂದನೆಗಳು.

ಗೋಕರ್ಣ

ಗೋಪಾಲಕೃಷ್ಣ ನಾಯಕ

ಪರಿವಿಡಿ

೧. ಪ್ರಸ್ತಾವನೆ

"ಜಾನಪದ" ಮಣ್ಣಿನ ಮಕ್ಕಳ ಬಾಳಿನುಸಿರು. ಅನಾದಿ ಕಾಲದಿಂದಲೂ ಹರಿದು ಬಂದ ಬದುಕಿನ ಬತ್ತದಿರುವ ಸಾಂಸ್ಕೃತಿಕ ನದಿ, ಜನರ ನಡೆ ನುಡಿ. ಸುಖಸಂತೋಷ ಸಂಸ್ಕಾರಗಳಿಗೆ ನೀರೆರೆದು ಪೋಷಿಸಿದ್ದು ಜಾನಪದ. ಸರ್ವ ಕಲೆಯ ಅಡಿಗಲ್ಲು ಜಾನಪದ. ಆಧುನಿಕ ಮಾನವನಲ್ಲಿ ಆದಿ ಮಾನವತನ ಗುಪ್ತವಾಗಿರುವಂತೆ ಆಧುನಿಕ ಕಲೆ, ವಿಜ್ಞಾನ, ತಾಂತ್ರಿಕ ಜ್ಞಾನಗಳಿಗೆ ಜಾನಪದವೇ ಸುಪ್ತ ಚೈತನ್ಯವಾಗಿದೆ.

ಮನುಷ್ಯ ಹುಟ್ಟಿದಾಗಲೇ ಮಾತು ಕಲಿಯಲಿಲ್ಲ. ಹಸುಳೆ ಹಸಿವೆಯಾದಾಗ ಸರಾಗವಾಗಿ ಅಳುತ್ತದೆ. ಹೊಟ್ಟೆ ತುಂಬಿದಾಗ ಆನಂದದಿಂದ "ಆ-ಊ" ಆಲಾಪಿಸುತ್ತದೆ. ಕೈಕಾಲು ಕುಪ್ಪಳಿಸಿ ಚಲಿಸುತ್ತದೆ. ಹೀಗೆ ಗಾಯನ ನರ್ತನ ಹಸುಳೆಯಿದ್ದಾಗ ಪ್ರಾರಂಭವಾಗಿ ದೊಡ್ಡವರಲ್ಲಿ ಸಹಜವಾಗಿ ಬೆಳೆದು ಬಂತು. ಆದಿಯಲ್ಲಿ ಬೇಟೆಯಲ್ಲಿ ಗಾಯಗೊಂಡು ನೋವಿನ ಆಲಾಪನೆ ಗೈದ ಮನುಷ್ಯ ಬೇಟೆ ದೊರೆತಾಗ ಗೆಲುವಿನ ಉನ್ಮಾದದಿಂದ ಕೇಕೆ ಹಾಕಿ ಕೂಗಿ ಕುಣಿದ. ಹೀಗೆ ಪ್ರಾರಂಭದಲ್ಲಿ ಕೇಕೆ, ಕೂಗು, ಕೈಚಲನೆ, ಹಾವ ಭಾವ, ಮುಖಮುದ್ರೆ, ಕುಣಿತ, ಆಂಗಿಕಾ-

ಭನಯಗಳ ಮೂಲಕ ಅಂತರಂಗದ ಭಾವನೆಗಳನ್ನು ಮನುಷ್ಯ ವ್ಯಕ್ತಪಡಿಸಿದ. ಬಹುಕಾಲದವರೆಗೆ ಆಂಗಿಕಾಭಿನಯವೇ ಅಂತ-ರಂಗದ ಅಭಿಪ್ರಾಯನ್ನು ವ್ಯಕ್ತಪಡಿಸುವ ಪ್ರಮುಖ ಮಾಧ್ಯಮ ವಾಗಿರಲು ಸಾಕು. ಕುಣಿತವೇ ಜಾನಪದ ಕಲೆಗಳಲ್ಲಿ ಅತಿ ಮೊದಲಿನದು ಎನ್ನಬಹುದು. ಆಂಗಿಕಾಭಿನಯದ ಹಿನ್ನೆಲೆಯಲ್ಲಿ ಕಾಕು–ಕೇಕೆ–ಮಾತು ಮೊಳಕೆಯೊಡೆಯಿತು. ಸಂತೋಷ ಇಲ್ಲವೆ ದುಃಖ ಅತಿಯಾದಾಗ ಮಾತು ಹಾಡಿನ ರೂಪದಲ್ಲಿ ಹೊರಹೊಮ್ಮುವದು ಪ್ರಕೃತಿ-ಸಹಜಗುಣ. ಭಾವದ ಲಯಕ್ಕೆ ಅನುಗುಣವಾಗಿ ರಾಗ–ತಾಳಗಳು ಉದಿಸಿದವು. ಇವುಗಳನ್ನು ಅನುಸರಿಸಿ ಇಟ್ಟ ಹೆಜ್ಜೆ ಮತ್ತು ಅಂಗಾಂಗ ಚಲನೆಗಳು ಜನ-ಪದ ನೃತ್ಯವನ್ನು ರೂಪಿಸಿದವು. ಅನುಕರಣೆಯೆ ಕಲೆಯ ಮೂಲ ಪ್ರವೃತ್ತಿ. ನಿಸರ್ಗವನ್ನು ಪ್ರಾಣಿಸಂಕುಲವನ್ನು ಅಣ-ಕಿಸಿ ಅನುಕರಿಸಿ ಕುಣಿತಗಳು ಇತರ ಕಲೆಗಳು ಬೆಳೆದು ಬಂದವು. ಜಾನಪದ ಕುಣಿತದಲ್ಲಿ ಕ್ಲಿಷ್ಟತೆ ಇರದೆ ಸರಳತೆಯೇ ಸೊಗಸಿನ ಅಂಶವಾಗಿದೆ. ಕುಣಿತಗಳೆಲ್ಲ ಮೊದಲಿಗೆ "ಆಟ"ಗಳೆನಿಸಿದವು

ಜನಸಾಮಾನ್ಯರ ಬಾಯಿಂದ ಬಾಯಿಗೆ ಬಂದದ್ದೇ ಜಾನ-ಪದ. ಜನಪದ ಸಾಹಿತ್ಯ–ಸಂಗೀತಾದಿ ಕಲೆಗಳ ಶಿಲ್ಪವು ಅತಿ ಸರಳವಾದದ್ದು; ಕೃತಕವಲ್ಲದ್ದು. ಮರೆಮೋಸ ಕೊಂಕುಗಳ ಅರಿವಿಲ್ಲದ್ದು. ಮೇಲುಕೀಳುಗಳ ಗದ್ದಲವಿಲ್ಲದ್ದು. ಸಮಸ್ತ ಲೋಕದ ಹಿತವನ್ನು ಬಯಸುವಂಥದ್ದು ಆಗಿದೆ.

ಜನಪದ ಕಲೆಗಳಲ್ಲಿ ದೇವತಾರಾಧನೆಗೆಂದು ಜನಿಸಿದವು ಹಲವು. ಮನರಂಜನೆಗೆಂದೆ ಹುಟ್ಟಿದವು ಕೆಲವು. ಮತ್ತೆ ಕೆಲವು

ನಿತ್ಯಜೀವನದ ಶ್ರಮ ನಿವಾರಣೆಗಾಗಿ ರೂಢಿಸಿಕೊಂಡವು; ಇನ್ನೂ ಕೆಲವು ಉಪಜೀವನ ದಾರಿಯನ್ನು ಅನುಸರಿಸಿ ಬಂದವುಗಳಾಗಿವೆ. ಪೂರ್ವದಲ್ಲಿ ಪ್ರಾಣಿಭಯ, ಮಳೆ ಗಾಳಿ ಬೆಂಕಿ ಭಯ, ಕಾಡಿನ ನೆಲೆಗಳ ಭಯ ಮುಂತಾದ ಭಯಗಳಿಂದಾಗಿ ಆ ಆ ದೇವರು ರೂಪುಗೊಂಡು ಭೂತ–ದೈವ–ವೃಕ್ಷ–ದೇವತೆಗಳ ಆರಾಧನೆಗಳು ನಡೆದವು. ಈ ಧಾರ್ಮಿಕ ವಿಧಿಗಳಿಗೆ ಹೊಂದಿಕೊಂಡು ಸಂಗೀತ ನೃತ್ಯ ಸಂಪ್ರದಾಯಗಳು ಕ್ರಮಗೊಂಡವು. ಮದುವೆ, ಮುಂಜಿ, ಪೂಜಾವಿಧಿಗಳಲ್ಲಿ ಜನಪದ ಕಲೆ ಹಾಸು-ಹೊಕ್ಕಾಗಿ ಬೆಳೆಯಿತು. ಗದ್ದೆಯಲ್ಲಿ ದುಡಿಯುವಾಗ, ಭತ್ತ ಕುಟ್ಟುವಾಗ, ಕಾಳು ಬೀಸುವಾಗ, ಗಾಡಿ ಹೊಡೆಯುವಾಗ, ದೋಣಿ ನಡಿಸುವಾಗ, ತೊಟ್ಟಿಲು ತೂಗುವಾಗ ಶ್ರಮದ ಕೆಲಸ ಮಾಡುವಾಗ ಹಾಡಿದರೆ ಹೊತ್ತು ಕಳೆದದ್ದು ಹಾಗೂ ಪಟ್ಟ ಪರಿಶ್ರಮದ ಅರಿವಾಗುವದಿಲ್ಲ. ಇದಕ್ಕಾಗಿಯೆ ವಿವಿಧ ರೀತಿಯ ಪದಗಳು ಹಾಡುಗಳು ಹುಟ್ಟಿದವು. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಡು ಹಾಗೂ ಪದಗಳಿಗೆ ಪ್ರತ್ಯೇಕ ಅರ್ಥವಿದೆ. ಗಂಡಸರು ಹೇಳುವದು 'ಪದ'. ಹೆಂಗಸರು ಹೇಳುವದು 'ಹಾಡು'.

ಪೂರ್ವದಲ್ಲಿರಲಿ ಪಶ್ಚಿಮದಲ್ಲಿರಲಿ ದೇವತಾರ್ಚನೆಯ ಅಂಗವಾಗಿ ಮೊದಲು ಕುಣಿತ, ಹಾಡು, ಸಾಹಿತ್ಯಗಳು ರೂಪುಗೊಂಡು ನಂತರ ಶಿಷ್ಟಕಲೆಗಳಾಗಿ ಅವು ಬೆಳೆದವು. ಶಾಸ್ತ್ರೀಯ ಸಂಗೀತ, ಸಾಹಿತ್ಯ, ನರ್ತನಗಳಿಗೆಲ್ಲ ತಾಯಿ ಆ ಆ ಪ್ರದೇಶದ ಜಾನಪದವೇ ಎನ್ನಬೇಕು. ಕಲೆಗಳು ಆ ಆ ಪ್ರದೇಶದ ಜಾನಪದದಿಂದ ಜೀವತಳೆದು ಮುಂದೆ "ಮಾರ್ಗ" (ಶಾಸ್ತ್ರೀಯ)ವಾಗಿ

ಪುನಃ ಜನಪ್ರಿಯ (ಪೊಪ್ಯುಲರ) ಆಗಿ ಪುನರಾವರ್ತನವಾಗುತ್ತಿರುವದು ಒಂದು ರೀತಿಯ ಲಯ-ಬದ್ಧ ವಿನ್ಯಾಸವೆನ್ನಬಹುದು.

ಒಂದೊಂದು ಪ್ರದೇಶದ ಜನರ ನಡೆ-ನುಡಿ, ಪರಿಸರ, ಬಾಳಿನ ಕ್ರಮ ಸಂಪ್ರದಾಯಗಳು ಒಂದೊಂದು ಬಗೆಯಾಗಿರುವುದು. ಅದಕ್ಕನುಸರಿಸಿ ಅವರ ಸಾಹಿತ್ಯ, ಸಂಗೀತ, ನೃತ್ಯಗಳ ವಿಧಾನ ಸಂಪ್ರದಾಯಗಳೂ ಬೇರೆ ಬೇರೆಯಾಗುವವು. ಅಲ್ಲಿಯ ಸಂಗೀತ ಪರಿಕರ, ಕುಣಿತ ವೈಖರಿ, ಉಡಿಗೆ ತೊಡಿಗೆ, ಆಚಾರ ವ್ಯವಹಾರಗಳಿಗೆ ಅನುಗುಣವಾಗಿ ಜನಪದ ಕಲೆ ಬೆಳೆಯುವದು. ಸಂಪ್ರದಾಯ, ಸಂಕೇತ, ಜೀವನಕ್ರಮಗಳ ಮೊತ್ತವೇ ಜಾನಪದ ಸಂಸ್ಕೃತಿ; ಪೀಳಿಗೆಯಿಂದ ಪೀಳಿಗೆಗೆ ಪಡೆದು ಬರುವ ಬಳುವಳಿ.

ಜಾನಪದವನ್ನು ಹಾಡು-ಕತೆ-ಪುರಾಣ-ಒಗಟು-ಗಾದೆ ಮೊದಲಾದ ಭಾಷಿಕ (ಸಾಹಿತ್ಯ)ರೂಪದಲ್ಲಿಯೂ ಸಂಗೀತ, ವಾದನ, ನರ್ತನ, ಆಟ, ಚಿತ್ರ, ಶಿಲ್ಪ ಮೊದಲಾದ ಇತರ ಕಲಾ ರೂಪದಲ್ಲಿಯೂ ಮದ್ದು, ಚಿಕಿತ್ಸೆ, ಯಕ್ಷಿಣಿ ಮೊದಲಾದ ತಾಂತ್ರಿಕ ರೂಪದಲ್ಲಿಯೂ ಗುರುತಿಸಬಹುದು.

ಜನಪದ ಕಲೆಗಳ ಬಗ್ಗೆ ಅರಿಯುವಾಗ ಒಂದು ನಿಶ್ಚಿತ ಪ್ರದೇಶದ ಬಗೆಗೆ ನೋಡುವದೇ ರೂಢಿ. ಏಕೆಂದರೆ ಜನಜೀವನದ ಪರಿಸರ ಬೇರೆ ಬೇರೆಯಾಗಿದ್ದಂತೆ ಜನಪದ ಕಲೆಯ ಪ್ರಕಾರದಲ್ಲಿಯೂ ವ್ಯತ್ಯಾಸಗಳು ಕಂಡುಬರುತ್ತವೆ. ಆ ಆ ಪ್ರದೇಶದ ಜನಪದ ಕಲೆಗಳನ್ನು ಅಭ್ಯಸಿಸಿದಾಗ ಅಲ್ಲಿಯ ಸಾಹಿತ್ಯ ಸಂಗೀತ ನಾಟ್ಯಗಳು ಒಂದಕ್ಕೊಂದು ಪೂರಕವಾಗಿರುತ್ತವೆ ಎಂಬುವದನ್ನು ಕಾಣಬಹುದು. ಸಾಹಿತ್ಯ ಸಂಗೀತಗಳ-

ನ್ನೊಳಗೊಂಡಿರುವದು ನೃತ್ಯ. ಉದಾಹರಣೆಗಾಗಿ ಯಕ್ಷಗಾನ ವನ್ನೇ ತೆಗೆದುಕೊಂಡರೆ ಯಕ್ಷಗಾನದ್ದೇ ಆದ ಸಂಗೀತ-ಸಾಹಿತ್ಯ-ನರ್ತನ ಸಲಕರಣೆಗಳು ಒಂದಕ್ಕೊಂದು ಪೂರಕವಾಗಿ ಬೆಳೆದು ಬಂದದ್ದನ್ನು ಕಾಣಬಹುದು. ಅಚ್ಚಿನಲ್ಲಿ ಮೂಡಿಬ ಸಾಹಿತ್ಯ-ವನ್ನು ವಿಭಿನ್ನ ರೀತಿಯಲ್ಲಿ ಹಾಡಿದಾಗ, ಓದಿದಾಗ, ಅದರ ಸೊಗಸು ಕಾಣದೇ ಹೋಗಬಹುದು. ಆದರೆ ಆ ಸಾಹಿತ್ಯ-ಗೀತಗಳನ್ನು ಆ ಆ ಪರಿಸರದ ಜನರ ಧಾಟಿ ಶೈಲಿಯಲ್ಲಿ ಹೇಳಿದಾಗ ಅದರ ಸತ್ವದ ಸೊಗಸಿನ ಅನುಭವ ಆಗದೇ ಇರದು. ಈ ದೃಷ್ಟಿಯಿಂದಲೆ ಜನಪದ ಕಲೆಯನ್ನು ಪ್ರಾದೇಶಿಕವಾಗಿ ನೋಡು ವದರಲ್ಲಿ ಅರ್ಥವಿದೆ.

೨. ಉತ್ತರ ಕನ್ನಡ ಜಾನಪದ

ಈಗಿನ ಉತ್ತರ ಕನ್ನಡ ಜಿಲ್ಲೆಯ ಪ್ರಾಕೃತಿಕ ಪರಿಸರವನ್ನು ಲಕ್ಷಿಸಿದಾಗ ಕರಾವಳಿ,ಮಲೆನಾಡು ಹಾಗು ಬಯಲು ಸೀಮೆ ಇವು ಸಮಾವೇಶಗೊಂಡಿರುವವು. ಕಾರವಾರ, ಅಂಕೋಲೆ, ಕುಮಟೆ, ಹೊನ್ನಾವರ,ಭಟ್ಕಳ ಕರಾವಳಿ ತಾಲೂಕುಗಳು,ಶಿರಸಿ,ಸಿದ್ದಾಪುರ ಯಲ್ಲಾಪುರ ಇವು ಮಲೆನಾಡಿನ ತಾಲೂಕುಗಳು ಮತ್ತು ಹಳಿ-ಯಾಳ, ಮುಂಡಗೋಡ, ಜೊಯಡಾ ತಾಲೂಕುಗಳು ಬಯ-ಲುಸೀಮೆಯ ಭಾಗಗಳಾಗಿವೆ. ಹೀಗಿರುವದರಿಂದ ಕರಾವಳಿಯ ಕಮನೀಯತೆ, ಮಲೆನಾಡ ಮೈಸಿರಿ, ಬಯಲು ಸೀಮೆಯ ಬೆಡಗನ್ನು ಒಂದಾಗಿಸಿಕೊಂಡ ಈ ಜಿಲ್ಲೆಯ ನಿಸರ್ಗ, ಜನ, ಭಾಷೆ ವೈವಿಧ್ಯಮಯವಾಗಿವೆ. ಅಂತೆಯೇ ಕಲೆಯೂ ವೈವಿಧ್ಯ-ಮಯ. ಕಡಲಿನ ಮಡಿಲಲ್ಲಿ ತೇಲುತ್ತಾ, ಕಾಡಿನ ಒಡಲಲ್ಲಿ ಕಲೆ

ಯುತ್ತಾ, ಮಲೆನಾಡಿನ ನಾಡಿಗೆ ಮಿಡಿಯುತ್ತಾ ಬಯಲಿನ ಬೆಡಗಿಗೆ ನಲಿಯುತ್ತಾ ಬಾಳುವ ಇಲ್ಲಿಯ ಜನವೃಂದದಲ್ಲಿ ಹಲವಾರು ಕಲೆಗಳು ಮೈವೆತ್ತು ಮೆರೆದಿವೆ.

ಈ ಜಿಲ್ಲೆಯಲ್ಲಿ ಹವ್ಯಕರು, ಹಾಲಕ್ಕಿ ಒಕ್ಕಲು, ನಾಮಧಾರಿಗಳು, ನಾಡವರು, ಕುಮಾರಪಂತ, ಗೌಡ ಸಾರಸ್ವತ, ಶೇಣ್ವಿ, ಭಂಡಾರಿ, ಹರಿಕಾಂತ, ಗಾಬೀತ, ಅಂಬಿಗ, ಹೊಲೇರ, ಚಮಗಾರ, ಹಳ್ಳೇರ, ಆಗೇರ, ಸಿದ್ದಿ, ನವಾಯತ, ದಾಲ್ಜಿ, ಲಿಂಗಾಯತ, ಮುಸಲ್ಮಾನ, ಕ್ರಿಶ್ಚನ್ ಮೊದಲಾದ ಜಾತಿ-ಜನಾಂಗಗಳಿವೆ. ಜಾತಿ ಜಾತಿಗೆ ವಿಶಿಷ್ಟವಾದ ಭಾಷೆ ಹಾಗು ಸಾಂಸ್ಕೃತಿಕ ಸಂಪ್ರದಾಯಗಳಿವೆ. ಮನೆಯಲ್ಲಿ ಮಾತನಾಡುವ ಭಾಷೆ ಬೇರೆ,ನಡೆಯುವ ರೀತಿರಿವಾಜುಗಳು ಬೇರೆ ಬೇರೆಯಾಗಿದ್ದರೂ ವೈರವಿಲ್ಲದೆ ಐಕ್ಯತೆಯಿಂದ ಕರ್ನಾಟಕ ಸಂಸ್ಕೃತಿಗೆ ಆದರ್ಶ ಪ್ರಾಯರಾಗಿ ಇಲ್ಲಿಯ ಜನ ಬಾಳಿದ್ದಾರೆ.

ಉತ್ತರ ಕನ್ನಡದಲ್ಲಿ ಕಂಡುಬರುವಷ್ಟು ಜನಪದ ಕಲೆಗಳು ಕರ್ನಾಟಕದ ಇನ್ನಾವ ಜಿಲ್ಲೆಯಲ್ಲಿಯೂ ಕಂಡು ಬರುವವದಿಲ್ಲ. ಕನ್ನಡ ಸಾಹಿತ್ಯಪರಿಷತ್ತಿನವರು ಕರ್ನಾಟಕದ ಜನಪದ ಕಲೆಗಳನ್ನೆಲ್ಲ ಅಭ್ಯಸಿಸಿ ಸದ್ಯ ಸುಮಾರು ಒಂದು ನೂರಾ ನಾಲ್ವತ್ತೆಂಟು ಕಲೆಗಳು ಕರ್ನಾಟಕದಲ್ಲಿವೆ ಎಂದಿದ್ದಾರೆ. ಇವುಗಳಲ್ಲಿ ಬಹಳಷ್ಟು ಈ ಜಿಲ್ಲೆಯಲ್ಲಿವೆ ಎಂಬುದು ಹೆಮ್ಮೆಯ ಸಂಗತಿ. ಹೀಗಾಗಲು ಕಾರಣ ಕರಾವಳಿ, ಮಲೆನಾಡು, ಬಯಲುಸೀಮೆಗಳ ಪರಿಸರದ ಪ್ರಭಾವ. ಈ ಮೂರೂ ಸೀಮೆಗಳ ಜಾನಪದ ಸಂಗಮವೆ ಈ ಜಿಲ್ಲೆಯ ಹಿರಿಮೆಯಾಗಿದೆ.

ಕಾರವಾರದ ಕಡೆ ಮರಾಠಿ ಹಾಗೂ ಗೋವೆ ಕೊಂಕಣಿ ಪ್ರಭಾವದಿಂದ ಮೂಡಿಬಂದ ಕಲೆಗಳೂ ಮುಂಡಗೋಡದಲ್ಲಿ ಟಿಬೇಟಿನಿಂದ ಬಂದವರ ಪರಂಪರಾಗತ ಕಲೆಗಳೂ ನೋಡಲು ಸಿಗುವವು. ಬಯಲುಸೀಮೆಯ ಹೋಳಿಹಬ್ಬ ಕರಾವಳಿಯಲ್ಲಿ ಸುಗ್ಗಿಹಬ್ಬವಾಗಿದೆ. ಮಾರಿಹಬ್ಬ ಬಂಡಿಹಬ್ಬಗಳು ಹಾಡು ಕುಣಿತಗಳಿಗೆ ಎಡೆಮಾಡಿಕೊಟ್ಟಿವೆ.

ಈ ಜಿಲ್ಲೆಯ ಬಯಲು ಸೀಮೆಯಲ್ಲಿ ಡೊಳ್ಳುಕುಣಿತ, ಗೀಗೀ ಮೇಳ, ಲಾವಣಿ, ಕರಡಿಮಜಲು, ಹುಲಿವೇಷ, ಕೋಲೆ ಬಸವ, ಮರಕಾಲು ಕುಣಿತಗಳು ಹೆಚ್ಚಾಗಿ ಕಂಡುಬರುತ್ತಿದ್ದು ಮಲೆನಾಡಿನಲ್ಲಿ ಬಿಂಗಿಪದ, ಆಲಗುಂ ಕುಣಿತ,ಡಮಾಮಿ ಕುಣಿತ, ಬೇಡರ ಕುಣಿತ ಮೊದಲಾದವುಗಳಿವೆ. ಸಣ್ಣಾಟ ಪರಜಿಲ್ಲೆ ಯಿಂದ ಬಂದ ಕಲೆಯಾದರೂ ಈ ಜಿಲ್ಲೆಯವರ ಕರಗತವಾಗಿದೆ. ಸಂಗ್ಯಾ ಬಾಳ್ಯಾ, ಗುಂಡುಬರಮನ ಕತೆ ಮೊದಲಾದ ಸಣ್ಣಾಟ ಗಳು ಇಲ್ಲಿ ಜನಪ್ರಿಯವಾಗಿವೆ. ಕಾರವಾರ ತಾಲೂಕಿನಲ್ಲಿ ಭಜನಾಬಾರೋಡ ಆಟಗಳು, ಫುಗಡಿ, ಕೋಲಾಟ, ಭಜನೆ, ಹಾಡು ಕುಣಿತಗಳು ಕೊಂಕಣಿ ಸಂಪ್ರದಾಯದಲ್ಲಿ ಪ್ರದರ್ಶಿಸ ಲ್ಪಡುತ್ತವೆ. ಈ ಎಲ್ಲ ಕಲೆಗಳಿಗೆ ಕಿರೀಟವಿಟ್ಟಂತೆ ಕರಾವಳಿ ಯಲ್ಲಿ ಯಕ್ಷಗಾನ, ಸುಗ್ಗಿಕುಣಿತ, ಗುಮಟೆಪಾಂಗುಗಳು ಪ್ರಪಂಚದ ಕಲಾರಸಿಕರ ಲಕ್ಷವನ್ನು ತಮ್ಮೆಡೆಗೆ ಸೆಳೆದುಕೊಂಡಿವೆ. ಜನಪದ ಗೀತ, ಕುಣಿತ, ಸಾಹಿತ್ಯಗಳೊಡನೆ ಜನಪದ ಚಿತ್ರ ಶಿಲ್ಪಾದಿ ಕಲೆಗಳೂ ಬೆಳೆದು ಬಂದಿವೆ. ಇಂತಿರುವ ಹಲವು ಜನಪದ ಕಲೆಗಳಲ್ಲಿ ಪ್ರಾಮುಖ್ಯವಾಗಿರುವ ಕೆಲವನ್ನು ಪರಿಚಯ ಮಾಡಿಕೊಳ್ಳೋಣ.

೩. ಗುಮಟೆ ಪಾಂಗು

ಉತ್ತರ ಕನ್ನಡದ ಒಂದು ವಿಶೇಷ ವಾದ್ಯ ಗುಮಟೆ. ಗುಮಟೆಯನ್ನು ಬಾರಿಸಿ ಅದರ ಗತ್ತಿನಲ್ಲಿ ಹೇಳುವ ಗಂಡಸರ ಪದಗಳು ಕರಾವಳಿ ಪ್ರದೇಶದಲ್ಲಿ ವಿಫುಲವಾಗಿವೆ. ಗುಮಟೆ ಎರಡುವರೆಯಿಂದ ಮೂರು ಅಡಿ ಉದ್ದವಾಗಿರುವ ಹೂಜಿ ಆಕಾರದ ಎರಡೂ ಬದಿಗಳಲ್ಲಿ ಬಾಯಿ ತೆರೆದಿರುವ ವಾದ್ಯವಾಗಿದೆ. ಒಂದು ಬದಿಯ ಬಾಯಿ ಅಗಲವಾಗಿದ್ದು ಅದಕ್ಕೆ ಉಡದ ಇಲ್ಲವೇ ಕಾನ ಕುರಿಯ ಚರ್ಮವನ್ನು ಬಿಗಿದಿರುತ್ತಾರೆ ಇನ್ನೊಂದು ಬದಿಯ ಬಾಯಿ ಕಿರಿದಾಗಿರುವದು. ತೂಗಲು ಅನುಕೂಲವಾಗುವಂತೆ ನಾರಿನ ಬಳ್ಳಿಯನ್ನು ಗುಮಟೆಯ ಎರಡು ಕಂಠಗಳಿಗೆ ಕಟ್ಟಿ ಹೊಟ್ಟೆಯ ಸುಮಾರಿಗೆ ಗುಮಟೆಯನ್ನು ತೂಗಿಕೊಂಡು ನಿಂತು ಗುಮಟೆ ನುಡಿಸುತ್ತಾರೆ. ಬಲಗೈಯಿಂದ ಗುಮಟೆಯನ್ನು ಬಾರಿಸುವಾಗ ಎಡಗೈಯಿಂದ ಗುಮಟೆಯ ಕಿರಿಬಾಯನ್ನು ಮುಚ್ಚಿ ತೆರೆದು ಒಳಹವೆಯನ್ನು ತಡೆದು ಬಿಟ್ಟು ಅನೇಕ ಬಗೆಯ ಪೆಟ್ಟು (ಗತ್ತು)ಗಳನ್ನು ಬಲವಾಗಿ ನುಡಿಸುತ್ತಾರೆ. ಏಕಕಾಲಕ್ಕೆ ಆರೇಳು ಜನರು ಸಾಲಾಗಿ ನಿಂತು ಗುಮಟೆ ಬಾರಿಸುವಾಗ ಅವರ ಕೈಯ ಸಾಂಘಿಕ ಚಲನೆ ಸೊಗಸಾಗಿರುತ್ತದೆ. ಗುಮಟೆ ಬಾರಿಸಿಕೊಂಡು ಪದ ಹೇಳುವ ಮೇಳದಲ್ಲಿ ಒಬ್ಬ ಹೇಳಿದ ಪದದ ಸಾಲನ್ನು ಇನ್ನುಳಿದವರು ಮರು ನುಡಿಯುತ್ತಾರೆ ಅಂಕೋಲಾ ಮತ್ತು ಗೋಕರ್ಣ ಸೀಮೆಯಲ್ಲಿಯ ಗುಮಟೆಯ ಮೇಳದಲ್ಲಿ 'ಕೂಚ' ಎಂಬವನೊಬ್ಬ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಗುಮಟೆಯವರ ಎದುರಿಗೆ ಚಕ್ರಾಕಾರದಲ್ಲಿ ಸುತ್ತುತ್ತ ಮೇಳ.

ದವರಿಗೆ ಉತ್ಸಾಹ ತುಂಬಲು ನಡುನಡುವೆ "ಶಾಭಾಸ್"ಎಂದು ಹೇಳುತ್ತಾ ಕುಣಿಯುತ್ತಿರುತ್ತಾನೆ. ಜಿಲ್ಲೆಯ ಇನ್ನಿತರ ಕಡೆ ಈ ರೀತಿ "ಕೂಚ" ಕುಣಿಯುವ ರೂಢಿ ಇಲ್ಲ.

ಘಟ್ಟದ ಕೆಳಗಿನ ತಾಲೂಕುಗಳಲ್ಲಿ ಹಳ್ಳೇರ, ಮುಕ್ರಿ, ಅಂಬಿಗ. ಕುಮಾರಪಂತ, ನಾಮಧಾರಿ, ಹರಕಂತ್ರ, ಉಪ್ಪಾರ ಹಾಗು ವಿಶೇಷವಾಗಿ ಹಾಲಕ್ಕಿ ಒಕ್ಕಲಿಗರಲ್ಲಿ ಗುಮಟೆಪದ ಹೇಳುವ ಸಂಪ್ರದಾಯವಿದೆ. ಘಟ್ಟದ ತಾಲೂಕಿನಲ್ಲಿ ವಾಸಿಸುವ ಕುಣಬಿ ಹಾಗು ಸಿದ್ದಿಯರೂ ಗುಮಟೆಯನ್ನು ಬಾರಿಸುವರು. ಹಾಲಕ್ಕಿ ಒಕ್ಕಲಿಗ ಮಾತ್ರ ಈ ಕಲೆ ತುಂಬಾ ಪ್ರಿಯ. ಸಂಪೂರ್ಣ ರಾತ್ರಿ ಗುಮಟೆ ಪದ ಹೇಳುತ್ತ ಕೇಳುತ್ತ ಆನಂದಿಸುವ ಒಕ್ಕಲಿಗೆ ಬೆಳಗಾದುವರ ಅರಿವಾಗುವದಿಲ್ಲ ! ಅವರ ಸಂಗ್ರಹದಲ್ಲಿ ಗುಮಟೆಯ ಪದಗಳು ಹೇರಳವಾಗಿವೆ. ಹೊಸಪದಗಳು ಹುಟ್ಟುತ್ತವೆ. ಗುಮಟೆ ಪದಗಳು ತುಂಬಾ ಅರ್ಥವತ್ತಾಗಿದ್ದು ಪದದ ಧಾಟಿಯಲ್ಲಿ ವೈವಿಧ್ಯ ಇದೆ. ಕೆಲವು ದೀರ್ಘ ಕಥನ ಕವನಗಳು ತಾಸೆರಡುತಾಸು ಹೇಳಿದರೂ ಮುಗಿಯುವದಿಲ್ಲ. ಕತೆಗಳನ್ನು ಜಾನಪದ ಶೈಲಿಯಲ್ಲಿ ಪದವಾಗಿ ಸೊಗಸಾಗಿ ಹೇಳುತ್ತಾರೆ. ಗುಮಟೆ ಪದಗಳಲ್ಲಿ ಕತೆ, ನೀತಿಬೋಧನೆ, ಸಮಾಜದ ವಿಡಂಬನೆ ಹಾಸ್ಯಗಳಿದ್ದು ಎಷ್ಟು ಕೇಳಿದರೂ ಬೇಸರ ಬರುವದಿಲ್ಲ. ರಾಮಾಯಣ, ಭಾರತ ಪುರಾಣಗಳು ಜಾನಪದದಲ್ಲಿ ಹರಿದು ಬರುತ್ತವೆ. ಭಕ್ತಿಪದ, ವೀರರ ಚರಿತೆ ಬದುಕಿನ ಸುಖ ದುಃಖ ನಿರೂಪಣೆ, ಪ್ರಣಯರ ಪದ ಮೊದಲಾದ ಗುಮಟೆಯ ಪದಗಳಲ್ಲಿ ಈ ಮಣ್ಣಿನ ಮಕ್ಕಳ ಜೀವನಾನುಭವದ ರಸಸಿದ್ದಿಯನ್ನು ಕಾಣಬಹುದು. ಡಾ॥

ಎನ್. ಆರ್. ನಾಯಕರು, ಹಾಗು ಡಾ॥ ಎಲ್.ಆರ್. ಹೆಗಡೆ ಇವರು ಗುಮಟೆ ಪದಗಳನ್ನು ಹೇರಳವಾಗಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಎಷ್ಟು ಸಂಗ್ರಹಿಸಿದರೂ ಮುಗಿಯದ ನಿಧಿ ಇದು.

ಅಂಬಿಗರ ಕನ್ಯೆಯನ್ನು ವಿನೋದದಿಂದ ಮಾತನಾಡಿಸುವ ಒಂದು ಪದ ಹೀಗಿದೆ :—

"ಸಾಣೆಕಟ್ಟೆಯ ಶಣ್ಣ ತಂಗಿ ಮುಗುವೆ
ಶೆಟುಲಿ ತಂದಿಯೇನೆ ?
ಹಾಸುಗಲ್ಲಮೆನೆ ಗಾಳ ಹಾಕುವನು
ನಿನ ಗಂಡನಾಗುನೇನೆ ?
ಕುದುರೆ ಹಳ್ಳದಲಿ ಜಿಗ್ಗ ಮಾಡುವಳು
ಅತ್ತೆಯಾಗುಳೇನೆ ?
ಸಾಗರಬೈಲಲಿ ದನವಕಾವನು
ಮಾವನಾಗುನೇನ ?"

ಬಡತನದ ಗೋಳನ್ನು ತೋಡಿಕೊಂಡ ಈ ಪದ ಎಷ್ಟು ಸರಳ ನೋಡಿರಿ :—

ಬಡವರ ಗೋಳು ಬಾಳಟ್ಟಾಯ್ತು, ತಂಗಿ ತಂಗಿ ।
ಭತ್ತದ ಚೀಲ ಲೇವಿಗೋಯ್ತು, ತಂಗಿ ತಂಗಿ ।
ಅಂಗ್ಡಿ ಅಕ್ಕಿ ತುಟ್ಟಿ ಆಯ್ತು, ತಂಗಿ ತಂಗಿ ।
ಅನ್ನದ ಬಟ್ಲಿಕೆ ಕಂಟ್ರೋಲಾಯ್ತು, ತಂಗಿ ತಂಗಿ ।
ಸಾವ್ಕಾರರಲ್ಲಿ ಸವಲತ್ತಿಲ್ಲ, ತಂಗಿ ತಂಗಿ ।
ಮಕ್ಳುಮರಿಗೆ ಉಪವಾಸಲ್ಲೆ, ತಂಗಿ ತಂಗಿ ।
ಒಡೆದಿರ ಮಕ್ಳಿಗೆ ಹೋಳ್ಗಿ ತುಪ್ಪ, ತಂಗಿ ತಂಗಿ ।
ಮುಕ್ರಿರ ಮಕ್ಳಿಗೆ ಹಳ್ಳದ ನೀರು, ತಂಗಿ ತಂಗಿ ॥

ಹೀಗೆ ಸುತ್ತಲಿನ ಜಾತಿಜನಾಂಗಗಳ ನೀತಿ, ರೀತಿ, ಶೀಲ-ಸಂಸ್ಕಾರಗಳ ಬಗೆಗೆ ಹೇಳುವ ಗುಮಟೆ ಪದಗಳನ್ನು ಕೇಳಬಹುದು. ಬಾಳಿನಲ್ಲಿ ಎಲ್ಲವೂ ಚೆಂದವಾಗಿ ಸರಿಯಾಗಿ ಇರಬೇಕೆಂಬುವದೆ ಈ ಪದಗಳ ಆಶಯು.

"ಉಲಿಯು ಇಲ್ಲದ ಗುಮಟೆ ಎಟ್ಟು ಬಾರ್ಶಿದರೇನು ?
ಅರ್ಥವಿಲ್ಲದ ಪದವ ಎಟ್ಟು ಹೇಳಿದರೇನು ?
ಗೆಜ್ಜೆ ಇಲ್ಲದ ಕುಣಿತ ಎಟ್ಟು ಕುಣದರೇನು ?
ಗೌಡರಿಲ್ಲದ ಕೂಟ ಎಟ್ಟು ಕೂಡಿದರೇನು ?"

ಗುಮಟೆಯುವರು ಈ ಪದಗಳ ಅರ್ಥದ ಮರ್ಮವನ್ನೂ ಅರಿತಿರುತ್ತಾರೆ.

ಗುಮಟೆಯು ಸಂಗಡವೆ ತಾಸೆ, ಚೆಂಡೆ, ಹಲಗೆ, ನಾಗ-ಸ್ವರ, ಕೊಳಲು, ತಾಳ, ಮದ್ದಲೆ, ಕಂಜರ, ಶಂಖ ಮುಂತಾದ ವಾದ್ಯಗಳನ್ನು ಬಳಸಿ ಭಜನೆ ಮಾಡುವ ಪರಿಪಾಠವಿದೆ. ಭಜನೆಯು ಕಾಲಕ್ಕೆ ಬಾರಿಸುವ ಗುಮಟೆ ಚಿಕ್ಕ ಆಕಾರದ್ದು. ಸುಮಾರು ಹದಿನೆಂಟು ಅಂಗುಲ ಉದ್ದವಾಗಿರುವದು. ಗಣೇಶೋತ್ಸವ, ದೀಪಾವಳಿ ದಿನಗಳಂದು ಮನೆ ಮನೆಗಳಲ್ಲಿ ಗುಮಟೆಪಾಂಗಿನ ಭಜನೆ ನಡೆಯುವದು. ಉಚ್ಚವರ್ಗದ ಜನರೂ ಗುಮಟೆಪಾಂಗಿನ ಭಜನೆಯಲ್ಲಿ ಪಾಲ್ಗೊಂಡು ಆನಂದಿಸುವರು. ಗೋಕರ್ಣ, ಕುಮಟೆ, ಅಂಕೋಲೆ, ಕಾರವಾರ ಪರಿಸರದ ಹಳ್ಳಿ ಹಳ್ಳಿಗಳಲ್ಲಿ ಜಾತ್ರೆಯು ಹಾಗು ದೇವರ ಉತ್ಸವದ ಸಂದರ್ಭಗಳಲ್ಲಿ ಗುಮಟೆಪಾಂಗಿನ ನಾದ ಹಗಲಿರುಳು ಕೇಳಿಬರುವದು.

៤. ಸುಗ್ಗಿ

ಹೋಳಿ ಹಬ್ಬದ ಹಿಂದಣ ದಿನಗಳಲ್ಲಿ ಕರಾವಳಿಯಲ್ಲಿ ಕಂಗೊಳಿಸುವ ನಯನಮನೋಹರ ಚೈತನ್ಯಶಾಲಿ ಜನಪ್ರಿಯ ಕಲೆಯೇ ಸುಗ್ಗಿಯಾಗಿದೆ. ಉತ್ತರ ಕನ್ನಡ ತಿಟ್ಟಿನ ಸುಗ್ಗಿಕುಣಿತ ತನ್ನ ಸೊಬಗಿನಿಂದಾಗಿ ದೇಶ ವಿದೇಶಗಳ ಜನತೆಯಿಂದ ಮುಕ್ತಕಂಠದಿಂದ ಮೆಚ್ಚುಗೆಯನ್ನು ಪಡೆದ ಜನಪದ ಕಲೆಯಾಗಿದೆ.

ಬೆಳೆಯನ್ನು ಕೊಯ್ದು ಮನೆ ತುಂಬಿದಾಗ ಮನತುಂಬಿದ ಹಿಗ್ಗಿನಲ್ಲಿ ಈ ನರ್ತನ ಮೈತಾಳಿದೆ. ಪ್ರಾರಂಭದಲ್ಲಿ ಭತ್ತದ ತೆನೆ, ತಳಿರು–ಹೂಗೊಂಚಲುಗಳಿಂದ ಶೃಂಗರಿಸಿಕೊಂಡು ಕುಣಿದಿರ-ಬೇಕು. ಈಗ ಅವುಗಳನ್ನು ಹೋಲುವ ಬೆಂಡಿನ ಬೇಗಡೆಯ ತುರಾಯಿಗಳನ್ನು ತಲೆಯಲ್ಲಿಯ ಕಿರೀಟದ ಮೇಲ್ಗಡೆಗೆ ಕಟ್ಟು-ವರು. ಈ ತುರಾಯಿಯ ಮೇಲ್ಗಡೆಗೆ ಬೆಂಡಿನ ಹೂವು ಹಕ್ಕಿಗಳು ರಾರಾಜಿಸುತ್ತವೆ. ತಲೆಯ ಹಿಂಭಾಗದಿಂದ ಬೆಂಡಿನ ಮಲ್ಲಿಗೆ ಹೂಗಳ ಸರಮಾಲೆಗಳನ್ನು ಇಳಿಬಿಟ್ಟಿರುತ್ತಾರೆ. ಮುಖಕ್ಕೆ ಬಣ್ಣ ಬಳಿದು ಕೆಂಪು–ಹಸಿರು ಬಣ್ಣದ ಅಂಗಿತೊಟ್ಟು ಅದಕ್ಕೊಪ್ಪುವ ಬಣ್ಣದ ದಟ್ಟಅಂಚಿನ ಸೀರೆಯನ್ನು ಮೊಣಕಾಲಿನವರೆಗೆ ಗರಿಗರಿಯಾಗಿಸಿ ವಿಶಿಷ್ಟ ರೀತಿಯಲ್ಲಿ ಉಟ್ಟು ಕಾಲಿಗೆ ಗೆಜ್ಜೆ ಕಟ್ಟಿ ಕೈಯಲ್ಲಿ ಕೋಲುಗಳನ್ನು ಹಿಡಿದು ಉತ್ಸಾಹದ ಬುಗ್ಗೆಗಳಂತೆ 'ಸುಗ್ಗಿಮಕ್ಕಳು' (ನರ್ತಕರು) ಕಂಗೊಳಿಸುವರು. ನಾಮಧಾರಿ, ಮುಕರಿ,ಹಳ್ಳೇರ,ಹಾಲಕ್ಕಿ ಒಕ್ಕಲು ಮೊದಲಾದ ಜಾತಿಯವರು ಸುಗ್ಗಿಮೇಳ ಹೊರಡಿಸುತ್ತಾರ.

ಹೋಳಿ ಹಬ್ಬದ ಐದು ದಿನ ಮೊದಲು ಸುಗ್ಗಿಮೇಳ ಹೊರಟು ಕಾಮನನ್ನು ಸುಟ್ಟನಂತರ ಸುಗ್ಗಿಕುಣಿತ ಮುಕ್ತಾಯ.

ವಾಗುವದು. ಆದರೆ ಬಹುದಿನ ಮೊದಲೇ ಒಕ್ಕಲಕೊಪ್ಪದಲ್ಲಿ ಸುಗ್ಗಿ ಕುಣಿತದ ತರಬೇತಿ ಪ್ರಾರಂಭವಾಗಿರುತ್ತದೆ. ಸುಗ್ಗಿ ಮೇಳ ದಲ್ಲಿ ಕುಣಿಯುವವರೆಲ್ಲ ಚೆನ್ನಾಗಿ ಪಳಗಿದವರೇ ಇದ್ದು ಧಾರ್ಮಿಕ ಕಟ್ಟುನಿಟ್ಟುಳ್ಳವರೂ ಆಗಿರಬೇಕು. ಯಾವದೇ ಪ್ರಕಾರದ ಸೂತಕ (ಅಮೆ) ಕುಣಿಯುವವನಿಗೆ ಇರಬಾರದು. ಪ್ರಾರಂಭ-ದಲ್ಲಿ ತಂಡದ 'ಹಿರಿಯ'ನು 'ಕರಿಅಕ್ಕಿ'ಯನ್ನು ಮಂತ್ರಿಸಿ ಕುಣಿಯುವವರಿಗೆ ಹಾಗು ವಾದ್ಯ ನುಡಿಸುವವರಿಗೆ ಕೊಡು-ವನು. ಆಗ ಅವರೆಲ್ಲ ಕರಿಕಣ (ಕಳ)ಕ್ಕೆ ಬಂದು ವೇಷತೊಟ್ಟು ಮೊದಲನೆ ರಾತ್ರಿ ಈ ಕರಿಕಣದಲ್ಲಿಯೆ ಕರಿದೇವ (ಕಾಮದೇವ) ರನ್ನು ಪ್ರತಿಷ್ಠಾಪಿಸಿ, ಅಕ್ಕಿ ಹಣ್ಣುಕಾಯಿ ಇಟ್ಟು ಪ್ರಾರ್ಥಿಸಿ ಪದಹೇಳಿ ಕುಣಿದು ರಾತ್ರಿ ಕಳೆಯುತ್ತಾರೆ. ನಂತರ ಈ ಸ್ಥಳ ದಿಂದ ಸುಗ್ಗಿ ಮೇಳವು ಊರೂರು ಸುತ್ತಲು ಹೊರಡುವಾಗ ಎಲ್ಲರಿಗೂ ತಿಳಿಯಲೆಂದು 'ಸನ್ನೆಕೋಲು' ಮತ್ತು 'ಹೆದ್ದಂಬೆ' ಎಂಬ ವಾದ್ಯಗಳನ್ನು ಹಿರಿಮದ್ದಳೆ ಜಾಗಟೆಗಳನ್ನು ದೊಡ್ಡದಾಗಿ ಬಾರಿಸಿ ಮೇಳದ ಯಾತ್ರೆಯನ್ನು ಸಾರುತ್ತಾರೆ.

ಸುಗ್ಗಿ ಮೇಳ ದಾರಿಯಲ್ಲಿ ಸಾಗಿ ಬರುವಾಗ ಬಹುಸುಂದರ ವಾಗಿ ಕಾಣುತ್ತದೆ. ತಾಳ, ಜಾಗಟೆ, ಗುಮಟೆ, ಮದ್ದಳೆ, ತಾಸೆ, ಹಿರಿಮೃದಂಗ, ನಾಗಸ್ವರಗಳ ಏರುನಾದದ ಹಿನ್ನೆಲೆಯಲ್ಲಿ ಮಂಡಲಾಕಾರವಾಗಿ ಮಣಿದು ಜಿಗಿದು ನರ್ತಿಸುವ ಸುಗ್ಗಿ ಮಕ್ಕಳ ಕುಣಿತ ತೀವ್ರಗತಿಗೆ ತಲುಪಿದಾಗ ತಲೆಯಲ್ಲಿಯ ತುರಾಯಿಯ ತೊನೆದಾಟ, ಕೈಯಲ್ಲಿಯ ಕೋಲಿನ ತಾಕಲಾಟ, ಗೆಜ್ಜೆಯಹೆಜ್ಜೆ ಚಲನೆಯ ತರಂಗಿತತೆ ಎಲ್ಲವೂ ಮೇಳವಿಸಿ ಗುಡುಗಿನ ಮಳೆಗೆ

ನವಿಲುಗಳು ನರ್ತಿಸಿದಂತೆ ಹೂಬನವೆ ರೂಪುಗೊಂಡು ಕುಣಿದಂತೆ ಭಾಸವಾಗುವದು;ಮೈನವಿರೇಳುವದು. ಕುಣಿಯುವವರೂ ಭಾವತುಂದಿಲರಾಗಿ ''ಚೋಹೋ ಚೋ-ಚೋಹೊ ಚೋಹ" ಎಂದು ನಡುನಡುವೆ ನುಡಿಯುತ್ತಾ ನರ್ತನದಲ್ಲಿ ಮೈಮರೆಯುವರು, ಎಷ್ಟು ಕುಣಿದರೂ ದಣಿಯದ ಮಣ್ಣಿನ ಮಕ್ಕಳಿವರು. "ಚೋಹ" ಎಂದರೆ ವೇಷ. ಈ ಶಬ್ದದ ಅರ್ಥ ಕುಣಿಯುವವರಿಗೆ ಈಗ ಗೊತ್ತಿಲ್ಲದಿದ್ದರೂ ಸುಗ್ಗಿಯ ಸೋಗಿನವರಿಗೆ ಕುಣಿತಕ್ಕೆ ತಾನ ಒದಗಿಸುವ ಶಬ್ದವಾಗಿ "ಚೋಹ" ಉಳಿದುಕೊಂಡಿದೆ. ಸುಗ್ಗಿ ಕುಣಿಯುವಾಗ ಕೋಲಾಟವಾಡುವದು ಸಹಜವಾಗಿ ಹೊಂದಿಕೊಂಡು ಬಂದಿದೆ. ಚಕ್ರಾಕಾರವಾಗಿ ನಿಂತು ಪದದ ಗತ್ತಿಗೆ ಅನುಗುಣವಾಗಿ ಕಾಲ್ಗೆಜ್ಜೆಗಳು ಉಲಿಯುತ್ತಿರಲು ಪದ್ಮದಂತೆ, ಬಲೆಯಂತೆ, ಕೋಟೆಯನ್ನು ಒಳಹೊಕ್ಕಂತೆ, ಜಡೆನೇಯುವಂತೆ ಹಾಸುಹೊಕ್ಕಾಗಿ ತರತರ ತೆರನಾಗಿ ಕೋಲಾಟವಾಡಿ ಕುಣಿಯುತ್ತಾರೆ. ಒಬ್ಬರಿಗೊಬ್ಬರು ಇಬ್ಬರು ಮೂವರು ಒಮ್ಮೊಮ್ಮೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕೋಲು ಹೊಡಿಯುವ ಪರಿ, ಚಲನೆಯಲ್ಲಿ ಸಂಧಿಸುವ ರೀತಿ, ಆ ವಿನ್ಯಾಸ ಚಾಕಚಕ್ಯತೆಗಳ ಸೊಗಸನ್ನು ಕಂಡೇ ತಣಿಯಬೇಕು. ಎರಡೂ ಕೈಯಲ್ಲಿ ಕೋಲು ಹಿಡಿದು ಕುಣಿಯುವ ಪದ್ಧತಿ ಕೆಲವಡೆ ಇದ್ದರೆ ಇನ್ನೂ ಕೆಲವಡೆ ಒಂದು ಕೈಯಲ್ಲಿ ಕೋಲು ಇನ್ನೊಂದು ಕೈಯಲ್ಲಿ ನವಿಲುಗರಿಯ ಕುಂಚ ಹಿಡಿದು ಕುಣಿಯುವದುಂಟು. ಅಂಕೋಲೆ-ಕುಮಟೆ ತಾಲೂಕುಗಳ ಸುಗ್ಗಿ ಮೇಳಗಳು ಕುಣಿತಕ್ಕೆ ಹೆಸರಾಗಿವೆ.

ಸುಗ್ಗಿಮೇಳದ ಜೊತೆ ಕರಡಿ ವೇಷದವನೊಬ್ಬ ಮೇಳ

ಸಾಗಿ ಬರುವಾಗ ಕೈಯಲ್ಲಿ ಕಟ್ಟಿಗೆಯ ಖಡ್ಗವನ್ನು ಹಿಡಿದು ಎದುರಿಗೆ ಕುಣಿಯುತ್ತಾ ಸಾಗಿರುತ್ತಾನೆ. ಈ "ಕರಡಿ"ತಂಡದ ರಕ್ಷಕನೆಂಬ ನಂಬುಗೆ ಸುಗ್ಗಿಮೇಳದವರಲ್ಲಿಗೆ ಸುಗ್ಗಿಮೇಳದ ಜೊತೆ ಅನೇಕ "ಚೋಹ" (ವೇಷ) ಕಂಗೊಳಿಸುತ್ತವೆ. ಸಮಾಜದ ವ್ಯಕ್ತಿಗಳ ವಿಡಂಬನೆಗೈದ ವೇಷಗಳು, ಐತಿಹಾಸ–ಪೌರಾಣಿಕ ಪಾತ್ರಗಳು, ವಿದೇಶಿ ವೇಷಧರಿಸಿ ವ್ಯಕ್ತಿಗಳು, ಪೋಲಿಸ ಕಳ್ಳರ ಪಾತ್ರ, ಇರಾಣಿ ಸ್ತ್ರೀಯರ ಸೋಗು, ಲಂಗದ ಹುಡುಗಿ, ಲುಂಗಿಯ ಸಾಬ ಮೊದಲಾದ ಆಧುನಿಕ ವೇಷ ಧರಿಸಿದ ಜನ "ಚೋಹ ಚೋಹ" ಎಂದು ಕುಣಿಯುತ್ತಿರುವ ಸುಗ್ಗಿಮೇಳದ ಸಂಗಡ ಸಾಗಿರುತ್ತಾರೆ. ಇಂಥ ಪಾತ್ರಧರಿಸಿ ದವರು ಕೆಲವೊಮ್ಮೆ ಉತ್ಸಾಹ ಉಕ್ಕಿದಾಗ ಕೈಯಲ್ಲಿದ್ದ ಕರವಸ್ತ್ರ ವನ್ನು ಬೀಸುತ್ತಾ ಕುಣಿಯುವದುಂಟು.

ಸುಗ್ಗಿಮೇಳದವರಿಗೆ ಹೋದಲ್ಲೆಲ್ಲ ಆದರದ ಸ್ವಾಗತ ಕಾದಿದೆ. ಹಳ್ಳಿಗರು ಈ ಮೇಳ ಬಂದಾಗ ಊಟ ಪಾನೀಯ ಹಣ ನೀಡಿ ಉಪಚರಿಸುವರು. ಪಟ್ಟಣದ ಜನವೂ ಸುಗ್ಗಿ ಕುಣಿಸಿ ಆನಂದಿಸುವರು. ಸುಗ್ಗಿ ಕುಣಿಯುವದರಿಂದ ರೋಗ ರುಜಿನಗಳು ತಲೆದೋರದೆ ಆ ವರುಷ ನಾಡು ಸಮೃದ್ಧಿ ಗೊಳ್ಳುವದೆಂಬ ಭಾವನೆ ಹಳ್ಳಿಗರಿಗಿದೆ. ಬೆಳಗಿನಿಂದ ಬೈಗಿನ ವರೆಗೂ ಬೀದಿ ಬೀದಿ ಸುತ್ತಿ ಮನೆ ಮನೆಗಳ ಮುಂದೆ ಎಷ್ಟು ಕುಣಿದರೂ ಸುಗ್ಗಿ ಮಕ್ಕಳಿಗೆ ದಣಿವಿಲ್ಲ. ಹುಣ್ಣಿಮೆಯ ದಿನ ಸುಗ್ಗಿ ಮೇಳ ತನ್ನೂರಿಗೆ ಹಿಂದಿರುಗಿ ತಮ್ಮ ಜಾತಿಯ ಹಿರಿ ಯನ ಮನೆಮುಂದೆ ಕುಣಿದು ಮತ್ತೆ ಕರಿಕಣಕ್ಕೆ ಮರಳಿ

ತುರಾಯಿ ವೇಷ ಭೂಷಣಗಳನ್ನು ಕಳಚಿಟ್ಟು ಕರಿಸುಟ್ಟು ಸ್ನಾನ ಮಾಡಿ ಸುಗ್ಗಿಹಬ್ಬಕ್ಕೆ ಮಂಗಳ ಹಾಡುವರು. ಧಾರ್ಮಿಕ ವಿಧಿಯೆಂದೂ ಆಚರಿಸಲಾಗುವ ಈ "ಸುಗ್ಗಿ" ಕಲಾಪೂರ್ಣ ಮನರಂಜನೆಯೂಗಿದೆ.

"ಹಿರೇಸುಗ್ಗಿ" ಹಾಗು "ಕಿರಿಸುಗ್ಗಿ" ಎಂಬ ಎರಡು ರೀತಿಯಲ್ಲಿ ಸುಗ್ಗಿಮೇಳಗಳನ್ನು ಹೊರಡಿಸುವರು. ಪರಿಪೂರ್ಣ ವೇಷಭೂಷಣ ಸಹಿತ ವೈಭವದಿಂದ ಹಿರಿದಾಗಿ ಸುಗ್ಗಿಹಬ್ಬವನ್ನು ಆಚರಿಸುವದೇ ಹಿರೇಸುಗ್ಗಿ. ಹೆಚ್ಚಿನ ವೇಷಭೂಷಣಗಳನ್ನು ಧರಿಸದೇ ಸಾಮಾನ್ಯವಾಗಿ ಮಾಡಿ ಮುಗಿಸುವದು ಕಿರಿಸುಗ್ಗಿ. ಹಾಲಕ್ಕಿ ಒಕ್ಕಲ ಸುಗ್ಗಿಕುಣಿತಕ್ಕೆ "ಚೋಹೋ-ಚೋ" ಇಲ್ಲವೆ "ಸೋಹೊ-ಸೋ" ಪಲ್ಲವಿಯ ತಾಳಕ್ಕೆ ಪದಗಳೆ ಬೇಕಾಗಿಲ್ಲ. ಆದರೂ ಸುಗ್ಗಿ ಕುಣಿಯುವಾಗ ಪದ ಹೇಳುವದು ತಂದಾನ-ತಾನತಂದಾನೋ" ನುಡಿಯುವದು ಸಾಮಾನ್ಯವಾಗಿದೆ. ಈ ಕುಣಿತಕ್ಕಾಗಿಯೇ ರಚಿಸಿದ ಪದಗಳು ಬೇಕಷ್ಟಿವೆ. ದೇವರ ಸ್ತುತಿ, ಭಜನೆ, ದಾಸರಪದ ಜಾತ್ರೆ-ರಥ ಮುಂತಾದವುಗಳನ್ನು ವರ್ಣಿಸಿದ ಕವನಗಳು, ಪ್ರಣಯಗೀತೆಗಳು ರಸವತ್ತಾಗಿದ್ದು ಸುಗ್ಗಿಕುಣಿತಕ್ಕೆ ಸೊಗಸಾಗಿ ಹೊಂದಿಸಲ್ಪಟ್ಟಿರುವವು.

ಸುಗ್ಗಿಯ ಕುರಿತು ಹಾಲಕ್ಕಿ ಒಕ್ಕಲಲ್ಲಿ ದಂತಕತೆಗಳಿವೆ. ಈ ಕಲೆ ಈ ಜಾತಿಗೇ ಹೇಗೆ ಬಂತೆಂಬ ಐತಿಹ್ಯವಿದೆ. ಒಂದು ಹೊಸಬಗೆಯ ನರ್ತನವನ್ನು ತಮ್ಮ ಮಕ್ಕಳಿಗೆ ಕಲಿಸಬೇಕೆಂಬ ಹಂಬಲ ಗಂಗೆ ಗೌರಿಯರಿಗೆ ಆಯಿತಂತೆ. ದೇವಗುರುವನ್ನು ಕರೆಸಿ ಇನ್ನೆಲ್ಲೂ ಇಲ್ಲದ ಹೊಸಕುಣಿತವನ್ನು ಕಲಿಸುವಂತೆ

ಹೇಳುವರು. ದೇವಗುರು ಹೊಸಬಗೆಯ ಕುಣಿತವನ್ನು ಮಕ್ಕಳಿಗೆ ಕಲಿಸುತ್ತಿರುವಾಗ ಶಿವನ ಆಗಮನ ಆಗುವದು. ತನ್ನ ಮಕ್ಕಳು ಕುಂಚಕೋಲು ಹಿಡಿದು ಕುಣಿಯುವದು ಶಿವನ ಮನಸ್ಸಿಗೆ ಬಾರದು. ಮಕ್ಕಳ ಕೈಯಲ್ಲಿದ್ದ ಕುಂಚ ಕೋಲುಗಳನ್ನು ಶಿವನು ಕಸಿದುಕೊಳ್ಳುವಾಗ ಅವು ಬಿದ್ದು ಹೋಗುತ್ತವೆ. ಕೆಳಗೆ ಬಿದ್ದ ಕುಂಚ ಕೋಲುಗಳನ್ನು ಹಾಲಕ್ಕಿ ಹುಡುಗನೊಬ್ಬ ಎತ್ತಿಕೊಳ್ಳು-ವನು. ಆಗ ದೇವಗುರುವು ಆ ಹುಡುಗನಿಗೆ ಆ ಕುಣಿತ ಕಲಿಸಿ ಹರಸಿ ಐದು ದಿನ ಮೀನು ತಿನ್ನದೆ ಮರಕಡಿಯದೆ ದೇವರನ್ನು ನೆನೆಯುತ್ತಾ ಈ ಕಲೆಯನ್ನು ಎಲ್ಲೆಡೆಗೆ ಪ್ರದರ್ಶಿಸಿಸೆಂದು ಅಪ್ಪಣೆ ಮಾಡಿದನು. ಅಂದಿನಿಂದ ಹಾಲಕ್ಕಿ ಒಕ್ಕಲಿಗೆ ಸುಗ್ಗಿ ಕುಣಿತ ಬಂತು.

ಇನ್ನೊಂದು ಕತೆಯಂತೆ ತ್ರಿಮೂರ್ತಿಗಳು ಸುಗ್ಗಿ ಕುಣಿ-ಯುತ್ತ ಬರುತ್ತಿರುವಾಗ ಮಹಾಲಕ್ಷ್ಮಿ ಅವರನ್ನು ಸ್ವಾಗತಿಸಿ ಉಣಬಡಿಸುತ್ತಾಳೆ. ಆಗ ಹೊರ ಜಗುಲಿಯ ಮೇಲೆ ಇಟ್ಟು ಹೋದ ಗುಮಟೆಯನ್ನು ಹಾಲಕ್ಕಿ ಹುಡುಗನೊಬ್ಬ ಕೈಗೆತ್ತಿ-ಕೊಂಡು ಬಾರಿಸುತ್ತಾನೆ ಹುಡುಗನು ಬಾರಿಸಿದ ನಾದಮಾಧುರ್ಯ ವನ್ನು ಮೆಚ್ಚಿದ ತ್ರಿಮೂರ್ತಿಗಳು ಆ ಗುಮಟೆಯನ್ನು ಆ ಹುಡುಗನ ಕೈಗಿತ್ತು ಇನ್ನು ಮುಂದೆ ನಿಮ್ಮ ಜಾತಿಯವರೆ ಸುಗ್ಗಿ ಕುಣಿಯಲಿ ಎಂದು ವರ ನೀಡಿದರಂತೆ. ಇಂದು ಹಾಲಕ್ಕಿ ಒಕ್ಕಲು ಸುಗ್ಗಿ ಕುಣಿತದಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಕುಮಾರ-ಪಂತ, ಹರಿಕಾಂತ, ನಾಮಧಾರಿ, ಮುಕ್ರಿ, ಹಳ್ಳೇರ, ಅಂಬಿಗ, ಸಿದ್ದಿ, ಕುಣಬಿ, ಕೊಂಕಣ ಮರಾಠಾ ಮೊದಲಾದವರೂ ಸುಗ್ಗಿ

ಕುಣಿಯುವರು. ಇಂದಿನ ದಿನಮಾನದಲ್ಲಿ ಬಡತನದ ಬವಣೆಯಲ್ಲಿ ಬೇಯುತ್ತಿರುವ ಈ ಸುಗ್ಗಿ ಮೇಳದವರಿಗೆ ಪ್ರತಿ ವರುಷ ಸುಗ್ಗಿ ಹೊರಡಿಸುವದು ಕಷ್ಟವಾಗುತ್ತದೆ. ಸುಗ್ಗಿಮೇಳ ಕಟ್ಟಲು ಬೇಕಾಗುವ ಸಾಮಾನು ಸಲಕರಣೆಗಳ ದರ ಗಗನಕ್ಕೆ ಏರಿದೆ. ಆದುದರಿಂದ ಸ್ವಾಭಾವಿಕವಾಗಿ ಈ ಕಲೆಯ ಬಗ್ಗೆ ಇದ್ದ ಉತ್ಸಾಹ ಕುಗ್ಗುತ್ತಿದೆ. ಬಡತನದ ಬಾಳಿನ ನೋವನ್ನು ಕ್ಷಣಕಾಲವಾದರೂ ಮರೆಸುವ, ಸಾಮಾಜಿಕ ಸ್ನೇಹವನ್ನು ಬೆಸೆಯುವ, ಬಣ್ಣದ ಬದುಕಿನ ಬೆಡಗಿನಿಂದ ಜನರನ್ನು ರಂಜಿಸುವ ಈ ಸುಗ್ಗಿ ಕುಣಿತ ನಶಿಸದಂತೆ ನೋಡಿಕೊಳ್ಳಬೇಕಾದದ್ದು ಸಮಾಜದ ಕರ್ತವ್ಯವಾಗಿದೆ.

೫. ಹೋಳಿ ಹಬ್ಬ

ಶಿವ ಕಾಮನನ್ನು ದಹಿಸಿದ ಪ್ರತೀಕವಾಗಿ ಈ ದಿನ ಊರವರೆಲ್ಲ ಸೇರಿ ಕಟ್ಟಿಗೆಯನ್ನು ಕೂಡಿಹಾಕಿ ಕಾಮನನ್ನು ಸುಟ್ಟು ಗುಲ್ಲೆಬ್ಬಿಸುತ್ತ ಬಣ್ಣದ ನೀರೆರಚುತ್ತ ನಾನಾ ರೀತಿಯ ವೇಷ ತೊಟ್ಟು ಈ ಹಬ್ಬವನ್ನು ಆಚರಿಸುವರು ಬಣ್ಣದ ಓಕುಳಿಯಾಡುವ ಸಂಭ್ರಮ ಘಟ್ಟದ ಮೇಲಿನ ತಾಲೂಕಿನಲ್ಲಿ ವಿಶೇಷವಾಗಿದೆ. ಘಟ್ಟದ ಕೆಳಗಿನ ತಾಲೂಕುಗಳಲ್ಲಿ ಕಾಮನನ್ನು ಸುಟ್ಟ 'ಕರಿ'ಯನ್ನು ಮೈಗೆಲ್ಲ ಲೇಪಿಸಿಕೊಂಡು ವಿಧವಿಧದ ವೇಷದಲ್ಲಿ ಮನೆಮನೆಗೆ ಹೋಗಿ ಬೇಡುವರು. ಆಗ ಹೇಳುವ ಪದದ ಕೆಲ ಸಾಲುಗಳು ಹೀಗಿವೆ.

"ಧುಮಸಾಯ್ಲೋ ತಮ್ಮಾ ದುಮಸಾಯ್ಲೋ
ಕಾಮನೋ ಭೀಮನೋ ದುಮಸಾಯ್ಲೋ ..
ಕಾಮಸತ್ತ ಮರುದಿನ ಬೆಲ್ಲಾಯ್ಸ ಉಣರೋ
ದುಮಸಾಯ್ಲೋ ತಮ್ಮ ಧುಮಸಾಯ್ಲೋ...
ಹೆಣ್ಣಕೇಳೋಕೆ ಹೋಗಿದ್ರೋ...ದುಮಸಾಯ್ಲೋ
ಹೆಣ್ಣ ಬಾಳ ದೊಡ್ಡ. ಗಂಡ ಬಾಳ ಸಣ್ಣ...
ದುಮಸಾಯ್ಲೋ
......ಆಚಿಕೇರಿ ಮಗುವೆ ಈಚಿಗ್ಯಾಕೆ ಬಂದೆ ?
ಸುಕ್ಕಿನುಂಡಿ ಜಾಯ್‌ಕಾಯ್ ರುಚಿ ನೋಡ ಬಂದೆ,
ದುಮಸಾಯ್ಲೋ ತಮ್ಮ ದುಮಸಾಯ್ಲೋ"

ಈ "ದುಮಸಾಯ್ಲೋ-ದುಮಸಾಯ್ಲೋ" ಪದದ ಅರ್ಥ ವೇನೆಂದು ನೋಡಬೇಕಾಗಿದೆ. "ದಿಮ್ಮಿಸಲೆನ್ನಿರೋ ತಮ್ಮ ಗಳಿರಾ" ಎಂಬ ಹೋಳಿ ದುಂದುಮೆಯನ್ನು ಕುರಿತು ವಾದಿ-ರಾಜರು ಹಾಡಿದ ಪದದ ಪಲ್ಲವಿ ಇದಾಗಿರಬಹುದೆ ?

ಹೋಳಿಹಬ್ಬದಲ್ಲಿ ಧರಿಸುವ ಪರಿಪರಿ ಸೋಗಿನ ಜೊತೆಗೆ ಕರಡಿಯ ವೇಷ ಎಲ್ಲೆಡೆಗೂ ಕಾಣಸಿಗುತ್ತದೆ. ವಿಶೇಷವಾಗಿ ಅಂಕೋಲೆ ಸೀಮೆಯಲ್ಲಿ ಹಾದಿಬೀದಿಗಳಲ್ಲಿ ನೂರಾರು ಮರಿ ಕರಡಿ ಹಾಗೂ ಹಿರಿಕರಡಿಗಳು ಹಿಂಡುಹಿಂಡಾಗಿ ಈ ದಿನ ಓಡಾಡುವ ದೃಶ್ಯ ರಂಜನೀಯವಾಗಿದೆ. ಅಲ್ಲಿ ಇದಕ್ಕೆ ಕರಡಿಹಬ್ಬ ಎನ್ನುವದುಂಟು.

ಕಾರವಾರದ ಕಡೆ ಗೋವೆ ಕುಣಬಿ ಮರಾಠಿಕುಣಬಿ ಎಂಬ ಪ್ರಭೇದವುಳ್ಳ ಜಾತಿಯಿದ್ದು ಕುಣಬಿಯವರು ಹೋಳಿಯ

ಕುಣಿತ ಮಾಡುವರು. ಬಿಳಿಯ ದೌಲಂಗಿ ಮತ್ತು ಕೆಂಪು ಬಣ್ಣದ ಸೀರೆಯನ್ನು ಅಡ್ಡಕಸೆಮಾಡಿ ಉಟ್ಟು ಬಿಳಿಶಲ್ಯವನ್ನು ಕತ್ತರಿ ಹಾಕಿತೊಟ್ಟು ರುಮಾಲಿನಲ್ಲಿ ಬಣ್ಣ ಬಣ್ಣದ ಹೂ-ಗರಿಗಳಿಂದ ಶೃಂಗರಿಸಿಕೊಂಡು ಕೈಗೆ ಬಳೆ ಕಾಲಿಗೆ ಗೆಜ್ಜೆಧರಿಸಿ ಗುಮಟೆ ಬಾರಿಸಿ ತಮ್ಮ ಭಾಷೆಯ ಪದಗಳನ್ನು ಹೇಳುತ್ತ ಗುಂಪಿನಲ್ಲಿ ಕುಣಿಯುತ್ತಾರೆ. ಹಬ್ಬ ಮುಗಿದೊಡನೆ ವೇಷ-ಭೂಷಣಗಳನ್ನು ಒಂದೆಡೆ ಕಟ್ಟಿಟ್ಟರೆ ಮುಂದಿನ ವರುಷ ಹಬ್ಬಕ್ಕೇ ಅವುಗಳನ್ನು ತೆಗೆಯುವರು.

೬. ಕೋಲಾಟ

ಭಾರತ ತುಂಬೆಲ್ಲ ಕೋಲಾಟವು ಒಂದಿಲ್ಲೊಂದು ರೀತಿಯಲ್ಲಿ ಕಂಗೊಳಿಸುತ್ತಿದೆ. ಹಿನ್ನೆಲೆಯ ವಾದ್ಯ ಹಾಗು ಗೀತಗಳು ಎಂಥವೇ ಇರಲಿ ತಾಳಕ್ಕೆ ತಕ್ಕಂತೆ ಹೆಜ್ಜೆಯಿಟ್ಟು ಕೈಯ ಕೋಲನ್ನು ಲಯಬದ್ಧವಾಗಿ ಬಡಿದು ಗುಂಪಾಗಿ ಕುಣಿಯುವದೆ ಕೋಲಾಟದ ಕಲೆಗಾರಿಕೆ. ಉತ್ತರ ಕನ್ನಡದಲ್ಲಿ ಸುಗ್ಗಿಮೇಳದಲ್ಲಿ ಕೋಲಾಟವಾಡುವದಲ್ಲದೆ ಗೋಕುಲಾಷ್ಟಮಿ, ಜಾತ್ರೆದಿನಗಳಲ್ಲಿ ಸಾಮಾನ್ಯ ಉಡುಪಿನಲ್ಲಿ ಕೋಲಾಡುವರು. ಸ್ತ್ರೀಯರು ಕೋಲಾಡುವಾಗ ಮೊಣಕಾಲಿನವರೆಗೆ ಸೀರೆಯುಟ್ಟು ಸೆರಗನ್ನು ಸೊಂಟಕ್ಕೆ ಸಿಕ್ಕಿಸುವರು.

ಕೋಲಾಟದ ಪ್ರಮುಖ ಸಾಧನಗಳೆಂದರೆ. ಕೋಲು ಹಾಗು ಗೆಜ್ಜೆ. ಕೋಲಿನ ತಾಳಕ್ಕೆ ಗೆಜ್ಜೆಯ ಹೆಜ್ಜೆ. ಹಿನ್ನೆಲೆಯಲ್ಲಿ

ರುವ ಸಂಗೀತ ವಾದ್ಯಗಳು ಕೋಲಾಟದ ಮೆರಗನ್ನು ಹೆಚ್ಚಿಸು ವವು. ಕೋಲಾಟದಲ್ಲಿ ತುಂಬಾ ಜಟಿಲವಾದ ಕುಣಿತದ ಮಾದರಿ ಗಳೂ ಇವೆ. ಶ್ರೀ ಗಣೇಶನನ್ನು ಮೊದಲಿಗೆ ವಂದಿಸಿ ಇತರ ದೇವತೆಗಳನ್ನು ಸ್ತುತಿಸಿ ಆಮೇಲೆ ದಾಸರಪದ, ದ್ವಿಪದಿ, ತ್ರಿಪದಿ ಗಳನ್ನು ಹಾಡಿ ಕುಣಿಯುವರು. ಕೋಲಿನ ಪೆಟ್ಟು ಹೆಜ್ಜೆಯ ಗತ್ತು ಗಮ್ಮತ್ತಿನದಾಗಿರುವದು. ಪದ್ಯದ ಧಾಟಿ ಸೊಂಪಾಗಿ ರುವದು. ಕೋಲಾಟದ ಪದಗಳು ಸುಶ್ರಾವ್ಯವೂ ಸತ್ವಪೂ-ರ್ಣವೂ ಆಗಿರುತ್ತವೆ. ಒಕ್ಕಲಮಕ್ಕಳ ಕೋಲಾಟದ ಪದಗಳ ಕೆಲಸಾಲುಗಳನ್ನು ಕೇಳಿರಿ–

“ತಂದಾನೆ ತಾನೋ ತಾನ ತಂದಾನೋ
ನಮ್ಮ ಜಟಕದ ಪೂಜೆಗೆ ಕೋಳಿ ತಂದಾನೋ ।
ಕೋಳಿ ತಂದಾನೋ ಮತ್ತೆ ಕೂಳ ತಂದಾನೋ
ತಂದಾನೋ ತಾನೋ ತಾನ ತಂದಾನೋ ।”

ಇನ್ನೊಂದರ ಕೆಲ ಸಾಲುಗಳು:—

“ಕೋಲು ಕೋಲೆನ್ನ ಕೋಲೆ ।ರನ್ನದಾ
ಕೋಲು ಕೋಲೆನ್ನ ಕೋಲೆ ॥
ಬಾಳೆಯ ಕೊನೆ ಚೆಂದ । ಸೂಳೆಯು ನುಡಿ ಚೆಂದ ।
ಗೋಳಾಡುತ್ತಿರುವ ಚೊಚೆ (ಸೊಸೆ) ಚೆಂದ ।
ಗೆಜ್ಜೆಯಾ ಕೋಲು ಕೋಲೆನ್ನ ಕೋಲೆ ॥

ಜಡೆ ಕೋಲಾಟ :– ಎಂಟು ಹಗ್ಗಗಳನ್ನು ಮೇಲೆ ಒಂದು ಬಿಂದುವಿನಲ್ಲಿ ಕೂಡಿಸಿ ಕಟ್ಟಿ ಹಗ್ಗಗಳ ಇನ್ನೊಂದು

ತುದಿಯನ್ನು ಬೆನ್ನಹಿಂದೆ ಟೊಂಕಕ್ಕೆ ಸಿಕ್ಕಿಸಿಕೊಂಡು ಎಂಟು ಜನರು ಕೋಲಾಡುತ್ತ ಹಾಸುಹೊಕ್ಕಾಗಿ ಚಲಿಸಿ ಆ ಹಗ್ಗಗಳ ಜಡೆ ಹೆಣೆದು ನಂತರ ಜಡೆಯನ್ನು ಬಿಚ್ಚಿ ತೋರಿಸುವ ಜಡೆ ಕೋಲಾಟದ ಕಲೆ ರಮ್ಯವಾಗಿದೆ.

೭. ಗೋಪು ನೃತ್ಯ

ಗೋಪು ಎಂದರೆ ರಿಬ್ಬನ್ನಿನಂತೆ ಉದ್ದವಾದ ಬಟ್ಟೆ ಇಲ್ಲವೆ ಸೀರೆಗಳನ್ನು ಜಡೆ ಕೋಲಾಟದಲ್ಲಿ ಕಟ್ಟುವಂತೆ ಮೇಲೆ ಕಟ್ಟಿ ಅವುಗಳ ಇನ್ನೊಂದು ತುದಿಯನ್ನು ಕೈಯಲ್ಲಿ ಹಿಡಿದು ಪದಹೇಳಿ ಕುಣಿದು ಗೋಪು (ಜಡೆ) ಹೆಣೆಯುವರು. ಬಹುಮಂದಿ ಗಂಡು ಹೆಣ್ಣು ಜೊತೆಸೇರಿ ಇಲ್ಲವೆ ಬೇರೆಬೇರೆಯಾಗಿ ಗೋಪು ನೃತ್ಯ ಮಾಡುವರು. ಪಟ್ಟಿಗೋಪು, ಜಡೆಗೋಪು, ನೆಲವು ಗೋಪು ಮುಂತಾದ ಹಲವು ಬಗೆಯ ಗೋಪು ಹೆಣೆಯುವ ಬಗೆಗಳಿವೆ. ಗೋಪನ್ನು ಹೆಣೆಯುವಾಗ ಯಾವ ರೀತಿಯಿಂದ ಹಾಸುಹೊಕ್ಕಾಗಿ ಚಲಿಸುತ್ತಾರೋ ಆ ಚಲನೆಯ ವಿರುದ್ಧ ದಿಶೆಯಲ್ಲಿ ಚಾಚೂ ತಪ್ಪದೇ ಚಲಿಸಿ ಹೆಣೆದ ಗೋಪನ್ನು ಬಿಡಿಸಿ ತೋರಿಸುವ ಕೌಶಲ್ಯ ಮೆಚ್ಚುವಂತಹದ್ದಾಗಿದೆ. ಕಾಲಿಗೆ ಗೆಜ್ಜೆ ಕಟ್ಟಿ ಸ್ತ್ರೀಯರು ಗೋಪಿಯರಂತೆ ಶೃಂಗರಿಸಿಕೊಂಡು ಕೃಷ್ಣನನ್ನು ಹಾಡಿಹೊಗಳುತ್ತಾ ಕುಣಿಯುವ ಮನಮೋಹಕ ಗೋಪು ನೃತ್ಯವು ಗೋಪಿಕಾನೃತ್ಯವೂ ಹೌದು.

೮. ಬಂಡಿ ಹಬ್ಬ

ಇನ್ನಿತರ ಹಬ್ಬಗಳ ಆಚರಣೆಯಲ್ಲಿ ಅವುಗಳಿಗೆ ಪೂರಕ ವಾದ ವಿವಿಧ ಕಲೆಗಳು ಬೆಳೆದು ಬಂದಿರುವಂತೆ ಉತ್ತರಕನ್ನಡ

ಜಿಲ್ಲೆಯ ಕರಾವಳಿಯ ವಿಶೇಷ ಹಬ್ಬವಾದ ಬಂಡಿಹಬ್ಬದಲ್ಲಿ ವಿಶೇಷ ಆಚರಣೆಗಳಿದ್ದು ವಿಶಿಷ್ಟ ಕಲೆಗಳನ್ನು ಕಾಣಬಹುದು. ಬಂಡಿಹಬ್ಬವು ಊರ ಅಮ್ಮನವರ (ದೇವತೆ) ದೇವಾಲಯಕ್ಕೆ ಸಂಬಂಧಿಸಿದ ಹಬ್ಬ. ಪ್ರತಿ ಊರಲ್ಲಿಯೂ ಒಂದು ಶಕ್ತಿ ದೇವತೆಯ ನೆಲೆಯಿದ್ದು ಭೂಮಿತಾಯಿ–ಅಮ್ಮನವರು ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ. ಮಣ್ಣಿನ ಮಕ್ಕಳ ಈ ಭೂಮಿ ತಾಯಿಯನ್ನು ಪೂಜಿಸುವ ಹಕ್ಕು ಮಣ್ಣಿನ ಕೆಲಸಮಾಡುವ ಕುಂಬಾರ (ಗುನಗ)ನಿಗೆ ಸಾಮಾನ್ಯವಾಗಿ ಕೊಡಲ್ಪಟ್ಟಿದೆ. ಈ ದೇವರ ಗರ್ಭಗುಡಿಯಲ್ಲಿ ಹುತ್ತ ಇರುವದೂ ಉಂಟು. ಹಳ್ಳಿಪಟ್ಟಣಗಳಲ್ಲಿ ಅಮ್ಮನವರೆಂದೆ ಕರಿಸಿಕೊಳ್ಳುವ ದೇವಾಲಯ ಗಳಿದ್ದು ಪ್ರತಿವರುಷ ಬಂಡಿಹಬ್ಬ ನಡೆಯುವದು. ಬ್ರಾಹ್ಮಣೇತರ ಪೂಜಾರಿಗಳ ಈ ದೇವತಾರಾಧನೆಯಲ್ಲಿ ಇಂದು ಅಲ್ಲಲ್ಲಿ ಬ್ರಾಹ್ಮಣರು ಪ್ರವೇಶಿಸಿ ಪೂಜಾ ವಿಧಾನವನ್ನು ಪರಿವರ್ತಿಸಿದ್ದರೂ ಬಂಡಿ ಹಬ್ಬದಲ್ಲಿ ಗುನಗ (ಕುಂಬಾರ)ನದೇ ಪ್ರಧಾನ ಪಾತ್ರವಾಗಿದ್ದು ಪೂರ್ವಪರಂಪರೆಯಂತೆ ವಿಧಿವಿಧಾನಗಳು ನಡೆಸಲ್ಪಡುತ್ತವೆ. ಬಂಡಿ ಹಬ್ಬದಲ್ಲಿ ಹಿಂದಿನ ಕಾಲದಲ್ಲಿ ನಾಲ್ಕು ಗಾಲಿಯ ಬಂಡಿಯನ್ನು ಎಳೆಯುತ್ತಿದ್ದರು. ಈ ಬಂಡಿಗೆ ಎತ್ತರದ ನೊಗವಿಟ್ಟು ಅದರ ಕೊಕ್ಕಿಗೆ ಹಗ್ಗದಿಂದ ತಮ್ಮನ್ನೆ ಕಟ್ಟಿಕೊಂಡು ಜೋತು ಬೀಳುವ ಹರಕೆಯನ್ನು ಜನ ಹೊರುತ್ತಿದ್ದರು. ಇಂದು ಈ ಬಂಡಿಯ ಕೊಕ್ಕಿಗೆ ಬಾಳೆಕೊನೆ, ತೆಂಗಿನಕಾಯಿ, ಫಲಾವಳಿಗಳನ್ನು ತೂಗು ಬಿಡುತ್ತಾರೆ. ಈ ರೀತಿ ಬಂಡಿ ಎಳೆಯುವದನ್ನು ಗೋಕರ್ಣ, ಶಿರಸಿ ಮೊದಲಾದ ಕಡೆಗಳಲ್ಲಿ ಕಾಣಬಹುದು. ಕುಮಟೆಯಲ್ಲಿ ಬಂಡಿಹಬ್ಬದ ದಿನ ಕೆಂಡ

ಹಾಯುವದನ್ನು ನೋಡಬಹುದು. ಅಂಕೋಲೆಯ ಬಂಡಿಹಬ್ಬ ಬಹುಪ್ರಸಿದ್ಧ. ಬಂಡಿಹಬ್ಬದಲ್ಲಿ ಕಳಸ ಹೊರಡಿಸುವದು, ಮುಖ ಆಡಿಸುವದು, ಹೂವಿನ ಮಕ್ಕಳ ಕುಣಿತ ಹಾಗು ಕೊನೆಯಲ್ಲಿ ಕುರಿಕೋಳಿಗಳನ್ನು ಬಲಿಕೊಡುವದು ಪ್ರಮುಖ ಕ್ರಿಯೆಗಳಾಗಿವೆ.

ಕಳಸ ಹೊರಡಿಸುವದು :— ದೇವಾಲಯದ ಚರ ಮೂರ್ತಿಯನ್ನು ಕಲಶದಲ್ಲಿ ಪ್ರತಿಷ್ಠಾಪಿಸಿ ಗುನಗನು ಕಳಸವನ್ನು ತಲೆಯ ಮೇಲೆ ಹೊತ್ತು ಊರಿನ ಗುತ್ತು (ಗುರ್ತು)ಗಳಿಗೆ ಹೋಗಿ ಸುತ್ತಿ ಬರುವದು ಈ ಉತ್ಸವದ ವಿಶೇಷವಾಗಿದೆ. ಬಂಡಿಹಬ್ಬದ ಕಲಶ ಅತಿ ಸುಂದರವಾಗಿ ಅಲಂಕರಿಸಲ್ಪಡುವದು. ಕಲಶವನ್ನು ರಚಿಸುವದೇ ಒಂದು ಸುಂದರ ಕಲೆ. ಕಲಶ (ಕಳಸ)ವೆಂದರೆ ತಾಮ್ರ, ಹಿತ್ತಾಳೆ, ಕಂಚು, ಬೆಳ್ಳಿ ಇಲ್ಲವೆ ಚಿನ್ನದಿಂದ ತಯಾರಿಸಿದ ದೇವತೆಯ ಚರಮೂರ್ತಿಯನ್ನು ಇರಿಸಿದ ದೊಡ್ಡ ಗಿಂಡಿ [ತಂಬಿಗೆ]. ಈ ತಂಬಿಗೆಯ ಮೇಲ್ಬದಿಗೆ ಬಿದಿರಿನ ಕಮಾನಿನಾಕಾರದ "ಚಿಬ್ಬು" ಕಟ್ಟುತ್ತಾರೆ. ಬಣ್ಣ ಬಣ್ಣದ ಹೂಗಳ ಸರಮಾಲೆಗಳಿಂದ ಶೃಂಗರಿಸಲ್ಪಟ್ಟ ಈ ಚಿಬ್ಬಿನ ಅಂಚುಗಳಲ್ಲಿ ಚಿಕ್ಕ ಚಿಕ್ಕ ಕೊಡೆ ಪತಾಕೆಗಳನ್ನು ಹಚ್ಚಿರುತ್ತಾರೆ. ಚಿಬ್ಬಿನ ಈ ಪ್ರಭಾವಳಿಯ ಮಧ್ಯದಲ್ಲಿ ಉತ್ಸವ ಮೂರ್ತಿಯನ್ನಿಟ್ಟು ಪೂಜಿಸುತ್ತಾರೆ. ಈ ಕಳಸವನ್ನು ಹೊರುವ ಕುಟುಂಬದವರಿಗೆ ಹೆಚ್ಚಿನ ಮನ್ನಣೆಯಿದೆ. ಅವರಿಗೆ ವಿಧಿಸಿದ ನಿಯಮಾಚರಣೆಗಳು ಕಟ್ಟುನಿಟ್ಟಾಗಿವೆ. ಕಳಸ ಹೊರಟು ತಿರುಗಿ ತನ್ನ ಮೂಲಸ್ಥಾನವನ್ನು ಸೇರು

ವವರೆಗೂ ಎಲ್ಲ ಕ್ರಮಗಳು ಸರಿಯಾಗಿ ಸಾಗಬೇಕು. ಕಿಂಚಿತ್ ವ್ಯತ್ಯಯವುಂಟಾದರೂ ದುರಂತ ಕಾದಿದೆ ಎಂಬ ಭಯ ಜನಕ್ಕಿದೆ. ಕಳಸ ಹೊತ್ತವರಿಗೆ ಆಗಾಗ ಮೈಯಲ್ಲಿ "ಭಾರ" (ದರ್ಶನ) ಬರುವದುಂಟು. ಆಗ ಆವೇಶದಲ್ಲಿ ಗುಸಗ ನುಡಿದದ್ದೆಲ್ಲ ದೇವತೆಯೆ ನುಡಿಸಿದ್ದೆಂದು ಭಕ್ತವೃಂದ ನಂಬುವರು; ತಮ್ಮ ಸಂಕಷ್ಟಗಳ ಕುರಿತು ಕಳಸದೇವತೆ ಎದುರು ಪ್ರಶ್ನೆಕೇಳಿ ಪರಿಹಾರ ಪಡೆಯುವರು.

ಹೂವಿನ ಮಕ್ಕಳ ಕುಣಿತ : ಬಂಡಿ-ಕಳಸದ ಎದುರಿಗೆ ಕೆಂಪು ಕುಸುಮಾಲೆ ಹೂವಿನಿಂದ ಮೈತುಂಬ ಅಲಂಕರಿಸಿಕೊಂಡು ಸೀರೆಯನ್ನು ಮೊಣಕಾಲಿನವರೆಗೆ ವಿಶಿಷ್ಟರೀತಿಯಿಂದ ಉಟ್ಟು ಕೈಯಲ್ಲಿ ಚಿಕ್ಕಕೋಲು ಇಲ್ಲವೆ ಅಂಬುಗತ್ತಿಯನ್ನು ಹಿಡಿದು ಹೂವಿನ ಮಕ್ಕಳು ಸಾಗುತ್ತಾರೆ. ಅಂಬುಗತ್ತಿಗೂ ಹೂವಿನಹಾರ ಸುತ್ತಿದ್ದು ಇರುತ್ತದೆ. ದೇವಿಯ ಕಳಸದ ಸುತ್ತಲೂ ಹನ್ನೆರಡು ಜನರು ಸುತ್ತುತ್ತಾ ಕುಣಿಯುತ್ತಿರುತ್ತಾರೆ. ಈ ಹನ್ನೆರಡು ಜನರು ಹನ್ನೆರಡುತಿಂಗಳ ಪ್ರತೀಕವಾಗಿರಬಹುದು. ಡೋಲಿನ ಬಡಿತಕ್ಕೆ ಹೆಜ್ಜೆ ಹಾಕುತ್ತ ಕುಣಿಯುವ ನರ್ತನದಲ್ಲಿ ಬೇಸಾಯದ ಕಾಯಕವನ್ನು ಸೂಚಿಸುವ ಕ್ರಮಗಳಾದ ಬಿತ್ತುವದು, ಗೊಬ್ಬರ ಹಾಕುವದು, ಕಳೆ ಕೀಳುವದು, ಬೆಳೆ ಕೊಯ್ಯುವದು, ಹೊತ್ತು ರಾಶಿಮಾಡುವದು, ಗಾಳಿಗೆ ಒಕ್ಕುವದು ಮೊದಲಾದ ಅಭಿನಯಗಳು ಕಾಣಸಿಗುವವು. ಕುಮಟೆಯ ಬಾಡಗ್ರಾಮದ ಬಂಡಿಹಬ್ಬದಲ್ಲಿ ಈ ಕುಣಿತವನ್ನು ನೋಡಬಹುದು. ಪಟಗಾರ ಜಾತಿಯವರಲ್ಲಿ ಈ ಕಲೆ ಇನ್ನೂ ಜೀವಂತ

ಏದೆ. ಗೋಕರ್ಣದ ಬಂಡಿಹಬ್ಬದಲ್ಲಿ ಗೌಡತಿಯರು ತಲೆಯ ಮೇಲೆ ಮಣ್ಣಿನ ಚಿಕ್ಕ ಕುಡಿಕೆ ಹೊತ್ತು, ಅದರಲ್ಲಿ ಅಕ್ಕಿ ಇಟ್ಟು, ಸಾಮಾನ್ಯ ಸ್ತ್ರೀ ಉಡುವಂತೆ ಸೀರೆ ಉಟ್ಟು ತಲೆತುಂಬ ಹೂ ಮುಡಿದು ಕಳಸದ ಎದುರಿಗೆ ಸೇವೆ ಸಲ್ಲಿಸುತ್ತಾರೆ. ಇವರಿಗೆ ಬೊಗಣಗಿತ್ತಿಯರು [ಬೊಗಣಹೊರುವವರು] ಎನ್ನುವರು.

ಮುಖ ಆಡಿಸುವದು: ಬಂಡಿಕಳಸ ಹೊರಡುತ್ತಿದ್ದಂತೆ ಆಡುಕಟ್ಟೆಯಲ್ಲಿ ಕಟ್ಟಿಗೆಯಿಂದ ರಚಿಸಿದ ಭಯಂಕರವಾಗಿ ತೋರುವ ಮುಖವಾಡಗಳನ್ನು ತಮ್ಮ ಮುಖದ ಎದುರಿಗೆ ಹಿಡಿದು ಕುಣಿದು ನಟಿಸುತ್ತಾರೆ ಈ ಮುಖಗಳು ಎರಡು ಅಡಿಯಿಂದ ನಾಲ್ಕು ಅಡಿಯ ವರೆಗೆ ಉದ್ದವಾಗಿದ್ದು ಒಂದುವರೆ ಅಡಿಗಳಷ್ಟು ಅಗಲವಾಗಿರುತ್ತವೆ. ಸೌಮ್ಯ ಮುಖಮುದ್ರೆಯುವು ಕೆಲವು ಇದ್ದರೆ ಅನೇಕ ಮುಖವಾಡಗಳು ಅತಿ ಭೀಕರವಾಗಿರುತ್ತವೆ. ಮುಖ ಆಡಿಸುವಾಗ ನೋಡುಗರಲ್ಲಿ ಭಯಭಕ್ತಿ ಆವರಿಸಿರುವದು. "ಮೋಡ್ಲುಮುಖ" ಎಂಬ ದೊಡ್ಡ ಆಕಾರದ ಮುಖ ಆಡಿಸುವಾಗ ಬಲಿಕೊಡುವ ಪದ್ಧತಿ ಕೆಲವೆಡೆ ಉಂಟಂತೆ.

ಮಾಸ್ತಿ ಕುಣಿತ : ಆಡುಕಟ್ಟೆಯಲ್ಲಿ (ಮುಖ ಆಡಿಸುವ ಕಟ್ಟೆಯಲ್ಲಿ) ಬಂಡಿಹಬ್ಬದ ಸಮಯ ಮಾಸ್ತಿಹಾಡನ್ನು ಹೇಳಿ ಅಭಿನಯಿಸುವರು. ಮಹಾಸತಿ ಮದುವೆಯಾದುದರಿಂದ ಪ್ರಾರಂಭಿಸಿ ಅವಳ ಪತಿ ಯುದ್ಧಕ್ಕೆ ಹೊರಟು ನಂತರ ಅವನು

ಹೋರಾಡಿ ಮಡಿದ ವಾರ್ತೆಬಂದು ಮಾಸ್ತಿ ಕೆಂಡದ ಕೊಂಡದಲ್ಲಿ ಸಹಗಮನ ಮಾಡಿಕೊಳ್ಳುವ ವರೆಗಿನ ಕತೆ ಈ ಕುಣಿತದಲ್ಲಿ ಅಭಿನಯಿಸಲ್ಪಡುವದು. ಉತ್ತರಕನ್ನಡದಲ್ಲಿ ಅಲ್ಲಲ್ಲಿ ಮಾಸ್ತಿ ಕಲ್ಲುಗಳು ಈ ಮಹಾಸತಿಯರ ಮೂಕಸಾಕ್ಷಿಯಾಗಿ ನಿಂತಿವೆ.

೯. ಹಗಣ

ಬಂಡಿ ಹಬ್ಬ, ಹೋಳಿಹುಣ್ಣಿಮೆ, ದೀಪಾವಳಿ ಹಾಗು ವಿಶೇಷ ಹಬ್ಬಹರಿದಿನಗಳಲ್ಲಿ ಹಗಣ (ಹಗರಣ, ಪ್ರಕರಣ) ಹಳ್ಳಿಗಳಲ್ಲಿ ನಡೆಯುವದು. ಹಗರಣ ಆಶುನಾಟಕ, ಬೀದಿ ನಾಟಕ, ಏಕಪಾತ್ರಾಭಿನಯಗಳ ಆದಿ ಅವಸ್ಥೆಯಂತಿರುವದು. ಪೌರಾಣಿಕ, ಐತಿಹಾಸಿಕ ಹಾಗು ಸಾಮಾಜಿಕ ಸಂದರ್ಭಗಳನ್ನು ಸೊಗಸಾಗಿ ಸೋಗುಧರಿಸಿ ಅಭಿನಯಿಸುವದುಂಟು. ಬೇರೆ ಬೇರೆ ಪಾತ್ರಗಳಲ್ಲಿ ಮಾತಿನ ಚಚಾಕಿ ಹಾರಿಸಿ ಸಮಾಜದ ಕುಂದು ಕೊರತೆಗಳನ್ನು ವಿಡಂಬಿಸಿ ರಂಜನೆ ಗೈಯುವರು. ವಿಶೇಷ ಸಂದರ್ಭಗಳಲ್ಲಿ ಎತ್ತಿನ ಗಾಡಿಯಲ್ಲಿ ಮೆರವಣಿಗೆ ನಡಿಸಿ ಹಗಣ ಮಾಡುವರು.

ಹಲಗೆ ವಾದ್ಯ, ಕುಣಿತ : ಹಬ್ಬದ ದಿನಗಳಲ್ಲಿ ಹರಿಜನರು, ಆಗೇರರು ಮೊದಲಾದವರಲ್ಲಿ ಹಲಗೆಯನ್ನು ಬಾರಿಸಿ ಕುಣಿಯುವ ರೂಢಿಯಿದೆ. ಹಲಗೆ ಅತಿ ಸರಳ ವಾದ್ಯ. ಕಟ್ಟಿಗೆಯಿಂದ ಮಾಡಿದ ದುಂಡಗಿನ ದಪ್ಪ ಒಂದುವರೆ–ಎರಡು ಅಡಿ

ವ್ಯಾಸದ ಬಳೆಗೆ ಹದಮಾಡಿದ ಕೋಣನ ಚರ್ಮ ಬಿಗಿದು ಕಟ್ಟಿ-ರುತ್ತಾರೆ. ಹೆಗಲಿಗೆ ಹಲಗೆಯನ್ನು ತೂಗು ಹಾಕಿ ಚಿಕ್ಕ ಚಕ್ಕೆ ಕಡ್ಡಿ ಮತ್ತೊಂದು ತೆಳ್ಳಗಿನ ಉದ್ದ ಕಡ್ಡಿಯಿಂದ ಬಾರಿಸುತ್ತಾರೆ. ಹಲಗೆ ವಾದ್ಯದ ಹಲವು ಬಗೆಯ ಬಡಿತಗಳಿವೆ. ತ್ವರಿತಗತಿಯ ಬಡಿತವನ್ನು ಬಾರಿಸುವ ವೈಖರಿ ಮೆಚ್ಚುವಂತದ್ದಾಗಿರುತ್ತದೆ. ಬಾರಿಸುವ ಮುನ್ನ ಬೆಂಕಿಯೆದುರು ಹಿಡಿದು ಹಲಗೆಯನ್ನು ಕಾಯಿಸುವ ರೂಢಿ ಇದೆ. ಹೀಗೆ ಮಾಡುವವದರಿಂದ ಹಲಗೆಯ ಖಣ ಖಣ ಧ್ವನಿ ಇಂಪಾಗಿರುವದು. ಹಲಗೆವಾದ್ಯ ಡಂಗುರ ಸಾರುವ ಪ್ರಚಾರವಾದ್ಯವಾಗಿತ್ತು.

ಪಳವಾದನ : ಈ ಜಿಲ್ಲೆಯ ದೇವಸ್ಥಾನದಲ್ಲಿ ಬಳಕೆ-ಯಲ್ಲಿರುವ ಚರ್ಮವಾದ್ಯ ಪಳ. ದೇವಾರ್ಚನೆಯಲ್ಲಿ 'ಬಲಿ' ನೀಡುವಾಗ ಈ ವಾದ್ಯವನ್ನು ನುಡಿಸುವರು. ದೇವಸ್ಥಾನದ ಸುತ್ತಲೂ ಬಲಿಕಲ್ಲುಗಳಿರುತ್ತವೆ. ಕೆಲವು ದೇವಾಲಯಗಳಲ್ಲಿ ನಿತ್ಯ ಅನ್ನಗಳಿಗೆ ಬಲಿನೀಡುವ ಸೇವೆ ನಡೆಯುವದು. ಆ ವೇಳೆಗೆ ಪಳ ಧ್ವನಿಗೈಯುತ್ತಿರಬೇಕು. ಪಳವನ್ನು ನಾಲ್ಕು ಅಡಿ ಉದ್ದ ಮೂರು ಅಡಿ ಸುತ್ತಳತೆ ಇರುವ ಮರದ ಕೊರಡಿನಲ್ಲಿ ತೋಡಿ ಎರಡೂ ಬದಿಗೆ ಕುರಿಯ ಚರ್ಮವನ್ನು ಹೊದಿಸಿ ದಾರಬಿಗಿದು ಸಣ್ಣಕೋಲಿನಿಂದ ಬಾರಿಸುವರು. ಪಳದ ಜೊತೆ ಪಂಚವಾದ್ಯ ಹಾಗು ನಗಾರಿ ಬಾರಿಸಬಹುದು. ಪಳ(ಬಳ)ವನ್ನು ಬಾರಿಸುವಲ್ಲಿ ವೈವಿಧ್ಯವಿದ್ದು ಶಾಸ್ತ್ರೀಯವಾಗಿ ವ್ಯವಸ್ಥಿತ ರೀತಿಯಲ್ಲಿಯೆ ಬಾರಿಸಬೇಕಂತೆ. ಇಲ್ಲವಾದರೆ ಅನರ್ಥವಾಗುವದೆಂಬ ನಂಬಿಗೆ ಇದೆ. ಪಳವನ್ನು ಬಾರಿಸುವವರು ಹೆಚ್ಚಾಗಿ ಭಂಡಾರಿ ಜನಾಂಗ-

ದವರು. ಬಾರಿಸುವವರು ಗೃಹಸ್ಥರಾಗಿರಬೇಕೆಂಬ ನಿಯಮವೂ ಇದೆಯಂತೆ!

ಹುಲಿ ಕುಣಿತ : ಹೋಳಿಹಬ್ಬ ಹಾಗು ವಿಶೇಷವಾಗಿ ಮೊಹರಂ ಹಬ್ಬದ ಸಮಯ ಮೈಗೆಲ್ಲ ಹುಲಿಯಂತೆ ಬಣ್ಣ ಸವರಿ ಹುಲಿಯ ಬಣ್ಣದ್ದೇ ಟೊಪ್ಪಿಗೆ ಧರಿಸಿ ಕೈಯೊಳಗೆ ಚಿಗರೆ ಕೊಂಬು ಬಾಯಲ್ಲಿ ಲಿಂಬು ಇಟ್ಟು ಹುಲಿವೇಷ ಕುಣಿಯುವರು. ಹುಲಿಯ ವೇಷಧಾರಿ ತಮಟೆ, ಹಲಗೆಗಳ ತಾಳಕ್ಕೆ ಕ್ರಮವಾಗಿ ಹೆಜ್ಜೆಯಿಟ್ಟು ಹುಲಿಯ ನಾನಾ ಭಂಗಿಯನ್ನು ಪ್ರದರ್ಶಿಸಿ ಕುಣಿಯುವನು. ಹುಲಿಯ ಬಾಲವನ್ನಾಗಲಿ ಟೊಂಕದ ದಾರವನ್ನಾಗಲಿ ಹಿಡಿದು ಹಿಂಬಾಲಿಸುವವನು ಒಬ್ಬನಿರುತ್ತಾನೆ. ಶಿಕಾರಿಯ ಆಡು (ಬಾಡು) ಎಂದು ನೆಲದ ಮೇಲೆ ನಿಂಬೆ ಹಣ್ಣನ್ನು ಇಟ್ಟು ಹುಲಿ ಬೇಟೆಯನ್ನು ಹಿಡಿಯುವ ಪರಿಯನ್ನು ಕುಣಿದು ತೋರುವರು. ಎರಡು ಹುಲಿವೇಷಗಳು ಎದುರಾದರೆ ಆವೇಶವುಕ್ಕಿ ಕುಣಿತಕ್ಕೆ ರಂಗೇರುವದು.

ಕೋಡಂಗಿ ಕುಣಿತ : ಸಮಾಜದಲ್ಲಿ ಕಾಣುವ ಗಂಡು ಹೆಣ್ಣುಗಳನ್ನು ಅನುಕರಿಸಿ ವೇಷಧರಿಸಿ ಹಬ್ಬ-ಜಾತ್ರೆಗಳಲ್ಲಿ ನರ್ತಿಸುತ್ತಾರೆ. ಗಂಡು ಹೆಣ್ಣನ್ನು ಅಡ್ಡಗಟ್ಟಿ ಆಣಕಿಸುವಂತೆ ಹೆಣ್ಣು ನಾಚಿ ತಪ್ಪಿಸಿಕೊಳ್ಳುವಂತೆ ಅಭಿನಯಿಸುತ್ತಾರೆ.

ಮರಕಾಲು ಕುಣಿತ : ಉತ್ಸವ ದಿನಗಳಲ್ಲಿ ಬೇರೆ ಬೇರೆ ವೇಷತೊಟ್ಟು ಮರದ ಕಾಲು ಕಟ್ಟಿಕೊಂಡು ಕುಣಿಯುವರು. ಎರಡು ಅಡಿಯಿಂದ ಅತಿ ಎತ್ತರದ ಮರಕಾಲುಗಳನ್ನು ಕಟ್ಟಿ

ಕೊಂಡು ಕುದುರೆ, ಎತ್ತುಗಳನ್ನು ಹೋಲುವ ಮರದ ಆಕೃತಿ ರಚಿಸಿ ಅವುಗಳನ್ನು ಏರಿ ಸವಾರಿ ಮಾಡುವಂತೆ ಕುಣಿದು ಕಾಣಿಸುತ್ತಾರೆ. ತಮಟೆ ನಾಗಸ್ವರದ ಜೊತೆ ಈ ಕುಣಿತ ನಡೆಯುವದು. ಕಾಲುಗಳನ್ನು ಹೊಂದಿಸಲು ಸರಿಯಾಗುವಂತೆ "ಕಂಡು" ಮಾಡಿ ಮರಕಾಲಿನ "ಕೋಡಿ"ನ ಭಾಗವನ್ನು ಕಾಲಿಗೆ ನೋವಾಗದಂತೆ ಬಟ್ಟೆ ಬಿಗಿದು ಕಟ್ಟಿಕೊಂಡಿರುತ್ತಾರೆ.

ಅತಿ ಎತ್ತರ ಮರಕಾಲು ಕಟ್ಟಿ ವಾದ್ಯಕ್ಕೆ ತಕ್ಕಂತೆ ಸಮತೋಲ ಕಾಪಾಡಿಕೊಂಡು ಕುಣಿಯುವದು ಮಹಾಸಾಧನೆ. ಎತ್ತರದಿಂದ ಬಾಗಿ ಇನ್ನೊಬ್ಬನ ತಲೆಯ ಮೇಲಿಟ್ಟ ನಾಣ್ಯ-ವನ್ನು ಬಾಯಿಂದ ಎತ್ತಿದಾಗ ಪ್ರೇಕ್ಷಕರು ಬೆರಗಾಗುವರು.

ತಾರ್ಲೆ ಕುಣಿತ : ಹಾಲಕ್ಕಿ ಒಕ್ಕಲಗಿತ್ತಿಯರ ಈ ಕುಣಿತ ಈಗ ದಿನಹೋದಂತೆ ಕಾಣದಾಗುತ್ತಲಿದೆ. ಬೆಳೆ ಬೆಳೆದು ನಾಡು ಸಮೃದ್ಧವಾಗಲು ಮಳೆರಾಯನ ಕೃಪೆ ಬೇಕು. ತಾರ್ಲೆ ಕುಣಿತ ಕುಣಿದರೆ ಮಳೆ ಬರುವದೆಂಬ ನಂಬುಗೆ ಇದೆ. ಮಳೆ-ರಾಜನಿಗೆ "ತಾರ್ಲೆ-ತಾರ್ಲೆ" ಹೇಳುತ್ತ ಗೌಡತಿ (ಒಕ್ಕಲಗಿತ್ತಿ) ಯರು ಕುಣಿದರೆ ಸಂತೋಷವಂತೆ; ಮಳೆಸುರಿಸುವನಂತೆ. ಕೆಲವೊಮ್ಮೆ ಈ ಕುಣಿತ ಪ್ರಾರಂಭಿಸಿ ಮಳೆ ಬರುವ ವರೆಗೂ ಕುಣಿಯುತ್ತಿದ್ದರಂತೆ. ಗದ್ದೆ ಬೈಲಿನಲ್ಲಿ ಗೌಡತಿಯರು ಸೇರಿ ಕೈಕೈ ಹಿಡಿದು ವರ್ತುಲಾಕಾರದಲ್ಲಿ ಹಿಂದೆ ಮುಂದೆ ಚಲಿಸಿ ನಲಿದು ನರ್ತಿಸುತ್ತಾರೆ. "ಹುಬ್ಬೆ ಹುಲ್ಲಾಡ್ಲೆ, ತಾರ್ಲೆ" ಎಂಬ ಆಶಯವುಳ್ಳ ತಾರ್ಲೆ ಹಾಡನ್ನು ಹಾಡುತ್ತಾರೆ. ಹಾಡಿನ ಕೊನೆಯಲ್ಲಿ ತಾರ್ಲೆ ತಾರ್ಲೆ ಎಂಬ ಸೊಲ್ಲಿರುತ್ತದೆ. ಪ್ರಕೃತಿ ಮಳೆರಾಜನೆಂಬ

ಪುರುಷನಿಂದ ತಣಿಸಲ್ಪಟ್ಟಾಗ ಸಸ್ಯಸಂಪತ್ತು ವೃದ್ಧಿಸುವದೆಂಬ ಆಶಯು ತಾರ್ಲೆ ಕುಣಿತದಲ್ಲಿದೆ. ಆದರಿಂದ ಕೆಲವೊಮ್ಮೆ ತಾರ್ಲೆ ಕುಣಿತದಲ್ಲಿ ಹೆಂಗಸರೊಡನೆ ಗಂಡಸರೂ ಪಾಲ್ಗೊಳ್ಳುವದುಂಟು. ಆಗ ಶೃಂಗಾರ ಚೇಷ್ಟೆಯ ಹಾಡನ್ನು ಹಾಡುವರು. ಗಂಡು ಹೆಣ್ಣನ್ನು ಛೇಡಿಸುತ್ತದೆ. ಹೆಣ್ಣು ಗಂಡನ್ನು ಛೇಡಿಸುತ್ತದೆ. ಹೆಣ್ಣು ಗಂಡನ್ನು ಮೊದಲು ಪ್ರತಿರೋಧಿಸುವದು. ನಂತರ ಗಂಡು ಗೆಲ್ಲುವದು. ಹೆಣ್ಣು ಗಂಡು ಜೊತೆಗೂಡಿ ಮದುವೆ ಆಗುವದು. ಈ ಎಲ್ಲದರ ಅಣಕು ಮಾಡುವರು. ಗದ್ದೆಯಲ್ಲಿ ಗಂಡು ಹೆಣ್ಣು ಜೊತೆಗೂಡಿದರೆ ಬೆಳೆ ಸಮೃದ್ಧಿ ಎಂಬ ಭಾವನೆ ಇದೆ. ಈ ತಾರ್ಲೆ ಕುಣಿತದ ಕಾಲಕ್ಕೆ ಬೆದ್ರಂಡೆ (ಬಿದಿರು-ಅಂಡೆ ?) ಹಾಡು ಹಾಡುತ್ತಾರಂತೆ. ಈ ಹಾಡುಗಳಲ್ಲಿ ಅಶ್ಲೀಲ ಪದಗಳಿರುವದರಿಂದಲೋ ಏನೋ ಈ ಜೊತೆಗೂಡುವ ಹಾಡನ್ನು ಎಲ್ಲರೆದುರಿಗೆ ಹಾಡಲು ಗೌಡತಿಯರು ಬಯಸುವ-ದಿಲ್ಲ. ಈ ಬೆದ್ರಂಡೆಯೇ "ಬೆದಂಡೆ" ಆಗಿರಬಹುದೇ ಎಂದು ಡಾ॥ ಎನ್. ಆರ್. ನಾಯಕರು ತರ್ಕಿಸಿದ್ದಾರೆ.

ಪುಗಡಿ ಕುಣಿತ : ಈ ಜಿಲ್ಲೆಗೆ ಗೋವೆ-ಮಹಾರಾಷ್ಟ್ರ ಕಡೆಯಿಂದ ಬಂದ ಈ ಕಲೆ ಈಗ ಕೊಂಕಣ ಮರಾಠಾ, ಕುಮಶಾರ ಪಂತ, ಭಂಡಾರಿ, ಗಾಬೀತ, ದೇವದಾಸಿಯರಲ್ಲಿ ಸಾಮಾನ್ಯ ವಾಗಿ ರೂಢಿಯಲ್ಲಿದೆ. ಕಲಾವಿದೆಯರು ಬರಿಕೊಡವನ್ನು ಎರಡೂ ಕೈಗಳಿಂದ ಬಾಯಿ ಹತ್ತಿರ ಹಿಡಿದು "ಫೂ-ಫೂ" ಎಂದು ಗಾಳಿ ಊದುತ್ತ ತಾಳಕ್ಕೆ ತಕ್ಕಂತೆ ಬಳಕುತ್ತ ಟೊಂಕ ಕಮ್ಮುಗಳನ್ನು ಚಲಿಸುತ್ತ ಸ್ವೇಚ್ಛೆಯಿಂದ ಮೈಮರೆತು ಕುಣಿ

ಯುವರು. ತಾಮ್ರದಕೊಡಕ್ಕೆ ಕೈಬಡಿಯ ತಾಳ-ಜಾಗಟೆ ಬಾರಿಸಿ ಭಾವಾವೇಶದಲ್ಲಿ ಕುಣಿಯುವಾಗ ಎಚ್ಚರ ತಪ್ಪುವದುಂಟು. ಹೀಗೆ ಎಚ್ಚರತಪ್ಪಿ ಬೀಳುವದಕ್ಕೆ "ಶೆಟ್ಟಿ ಬರುವದು" ಎನ್ನುತ್ತಾರೆ. ಈ ಎಚ್ಚರತಪ್ಪಿದವಳನ್ನು ಬಾಣಂತ ಸ್ತ್ರೀ ಮುಟ್ಟಿದರೆ ತಕ್ಷಣ ಪ್ರಜ್ಞೆ ಬರುವದಂತೆ. ಮಗುವಿಗೆ ಹೆಸರಿಡುವ ದಿನ ಕುಮಾರಪಂತ ಹೆಂಗಸರು ಸೇರಿ ಕಂಚಿನ ಬಟ್ಟಲನ್ನು ಬಾರಿಸಿಕೊಂಡು ಪುಗಡಿ ಕುಣಿಯುವ ರೂಢಿಯಿದೆ. ಚವತಿ, ದೀಪಾವಳಿ, ಗಂಗಾಷ್ಟಮಿ, ಕೃಷ್ಣಷ್ಟಮಿ ದಿನಗಳಲ್ಲಿ ಮಂಗಳ ಕಾರ್ಯ ನಡೆದಾಗ ಪುಗಡಿ ಕುಣಿಯುವರು. ಪುಗಡಿಯನ್ನು ಬಣ್ಣಿಸಿದ ಒಂದು ಲಾವಣಿ ಇಂತಿದೆ.

"ತಾಳಗತ್ತ ಹುಡಿದಾಂಗ, ನಗಾರಿ ನುಡಿದಾಂಗ।
ದುಮುದುಮಿ ಸಿಡಿದಾಂಗ, ನೌಬತ್ತ ಬಡಿದಾಂಗ।
ತಿಪ್ಪಿಠಲಾಗ ಒಗೆದಾಂಗ, ಸುದ್ದ ನವಿಲು ಕುಣಿದಾಂಗ।
ಚಿಟ್ಟ ಜಡ್ಲೆ ಸಿಡಿದಾಂಗ, ಕೊಂಬಕಾಳಿ ಮಿಡಿದಾಂಗ।
ತಂಡ ತಂಡ ನೆರೆದಿತ್ತೊ ಜನ, ಕುಣಿದು ಗೋಕಲಾಷ್ಟಮಿ
ದಿನ॥

೧೦. ಲಾವಣಿ ಹಾಗು ಗೀಗೀಪದ

ಜನಪದ ಗೀತಗಳಲ್ಲಿ ಲಾವಣಿಗಳು ಹಾಗು ಗೀಗೀ ಪದಗಳು ಹಾಡಲು ಉತ್ತೇಜಕವಾಗಿದ್ದು ಕೇಳುಗನಮೇಲೆ ಪ್ರಭಾವ ಬೀರುತ್ತವೆ. ಘಟ್ಟದ ಸೀಮೆಯಿಂದ ಮಹಾರಾಷ್ಟ್ರದಿಂದ ಹರಿದು ಬಂದ ಈ ಕಲಾಪ್ರಕಾರಗಳು ನೀತಿ ಬೋಧೆ, ವೀರ

ಚರಿತೆ, ಶೃಂಗಾರವರ್ಣನೆಗಳಿಗೆ ಹೆಸರಾಗಿವೆ. ಮರಾಠಿಯಲ್ಲಿ 'ಲಾವಣಿ' ಎಂದರೆ ಹತ್ತಿರ ತರುವದು, ಒಟ್ಟಿಗೆ ಸೇರಿಸುವದು ಎಂದರ್ಥ. ಲಾವಣಿ ಹಾಡುವಾಗ ಚರಣದ ಕೊನೆಯಲ್ಲಿ "ಜೀಯು-ಜೀಯು-ಜೀಯು"ಎಂದು ಹೇಳುವ ರೂಢಿ ಉಂಟು. ಆದನ್ನೆ ಗೀಗೀಪದದಲ್ಲಿ ಗೀಯು-ಗೀಯು ಎಂದೆನ್ನುವರು. ಈಗೀಗ ರೀಯು-ರೀಯು-ರೀಯು-ಎಂದೂ ಹೇಳುವರು. ಏಕತಾರಿ ಹಿಡಿದು ತೆಳ್ಳಗಿನ ಚರ್ಮದ ಹಲಗೆ ವಾದ್ಯ ಬಾರಿಸಿ ಇಂದಿನ ಸಮಾಜದ ಅಂಕುಡೊಂಕುಗಳನ್ನು ತಿದ್ದಲೋಸುಗ ರೇಶನ್, ವ್ಯಾಪಾರ, ಜೂಜು, ವಕೀಲಿ, ಸೂಳೆಗಾರಿಕೆ, ಸರಕಾರ ಮೊದಲಾವುಗಳ ಮೇಲೆ ಹಾಡು ಕಟ್ಟಿ ಹಾಡುವರು. ದೇಶಭಕ್ತಿ, ತತ್ವನೀತಿ, ಧರ್ಮಬೋಧೆ ಕಾರ್ಯಗಳನ್ನು ಈ ಪದಗಳ ಮೂಲಕ ಚೆನ್ನಾಗಿ ಪ್ರಚೋದಿಸಬಹುದು. ಅಂತ್ಯಪ್ರಾಸ ಪ್ರಧಾನವಾಗಿರುವ ಈ ಪದ್ಯಗಳು ಆಕರ್ಷಕವಾಗಿರುವವು. ಕ್ರಿ.ಶ. ೧೬೨೦ರ ಸುಮಾರಿಗೆ ಗುಣಚಂದ್ರನು ಲಾವಣಿ ಲಕ್ಷಣ ವನ್ನು ಲಾವಣಿಯಲ್ಲಿಯೇ ಹೇಳಿರುವನು :—

"ಲಘುಗಳ ಮಿಳಿತವ ಮಾಡಿ
ಕೊನೆಯಲಿ ಗುರುಗಳ ಹೂಡಿ
ಅರ್ಥದ ಸಾರವ ನೋಡಿ
ಪ್ರಾಸವ ಕೊನೆಯಲಿ ಹೂಡಿ
ಪಾದಮಿತಿ ಬೀಸಾಡಿ
ಲಾವಳಿ(ಣಿ) ಕೃತಿಗಳ ಪಾಡಿ ॥"

ಘಟ್ಟದ ತಾಲೂಕುಗಳಲ್ಲಿ ಕಾರವಾರದ ಕಡೆ ಗೀಗೀಪದ-ಲಾವಣಿ ಗಳನ್ನು ಕೇಳಬಹುದು.

ಕಾಡ್ಯಾ ಕುಣಿತ : ಕಾಡಿನ ಹಿಂಸ್ರಪ್ರಾಣಿ, ದೆವ್ವ, ಪಿಶಾಚಿಗಳಿಂದ ಮುಕ್ತಿ ಪಡೆಯಲು ಮುಕ್ರಿ,ಹಳ್ಳೇರ ಮೊದಲಾದವರು ಕಾಡ್ಯಾ ಕುಣಿತ ಮಾಡುವರು. ಹೊನ್ನಾವರ, ಭಟ್ಕಳ ತಾಲೂಕುಗಳಲ್ಲಿ ಈ ಕುಣಿತ ಕಂಡುಬರುವದು. ತುಳಸಿಹಬ್ಬ-ದಲ್ಲಿ ಮೂರು ದಿನ, ಸಂಕ್ರಾಂತಿ ಹಬ್ಬದಲ್ಲಿ ಎಂಟು ದಿನ ಹಳ್ಳೇರ ಹಾಗು ಮುಕ್ರಿ ಕುಟುಂಬದವರೆಲ್ಲ ಜಟ್ಟಿಗ ದೇವರ ಪೂಜೆಮಾಡಿ ಈ ಕುಣಿತ ಕುಣಿಯುವರು. ಒಬ್ಬನಿಗೆ ಮಾವಿನ ತಳಿರಿನ ಉಡುಗೆ ಉಡಿಸಿ ಮುಖಕ್ಕೆ ಬಣ್ಣಬಳಿದು ಕೈಯಲ್ಲಿ ಕಾಡಿನ ಜಲ್ಲಿಯನ್ನು ಕೊಟ್ಟು ಅವನ ಸುತ್ತಲೂ ಉಳಿದವರು ಕುಣಿಯುವರು. ಒಬ್ಬ ಹೇಳುವ ಪದಕ್ಕೆ ಉಳಿದವರು ಧ್ವನಿಗೂಡಿಸುವರು. ಕೊಳಲು, ಗಿಡಿಬಿಡಿ, ಸನಾಯ್ ಮೊದಲಾದ ವಾದ್ಯ ಬಾರಿಸಿ ಮೊದಲು ಜಾತಿಯ ಹಿರಿಯನ ತುಳಸಿಕಟ್ಟೆಯ ಮುಂದೆ ಕುಣಿದು ನಂತರ ಇತರರ ಮನೆಗೆ ಹೋಗಿ ಕುಣಿಯುವರು. ಕಾಡ್ಯಾಕುಣಿತದ ಹಾಡುಗಳು ಸಾಂಸ್ಕೃತಿಕ ಅಧ್ಯಯನಕ್ಕೆ ಯೋಗ್ಯವಾಗಿವೆ. "ಊರಿಗೆ ಬಂದ ಮಾರಿಯಾ ತಿಂದ್ಹೋಡಿಯೋ ಕಾಡಿಯಾ" ಎಂಬ ಸಾಲು ಇವರ ಹಾಡಿ-ನಲ್ಲಿದೆ. ದೊಡ್ಡ ಗುಲ್ಲೆಬ್ಬಿಸಿ ಕುಣಿದರೆ ಕಾಡಿನ ಪ್ರಾಣಿಗಳು ನಾಶವಾಗುತ್ತವೆ ಎನ್ನುವ ಈ ಜನ ಇದಕ್ಕೆ ಕಾಡಿನಹಬ್ಬ ಎನ್ನುತ್ತಾರೆ.

ಬೇಡನ ಕುಣಿತ : ಹೋಳಿ, ದೀಪಾವಳಿ ಹಬ್ಬದ ವೇಷಗಳಲ್ಲಿ ಬೇಡನ ನೃತ್ಯ ಜನಮನ ಸೆಳೆಯುವದು. ಬೇಡರಾಜನ ಸೋಗು ಧರಿಸಿದವನು ಮುಖಕ್ಕೆ ಕೆಂಪು ಬಿಳಿ ಬಣ್ಣ ಬಳಿದು ದಪ್ಪ ಮೀಸೆ ಹೊತ್ತು ಕಿರೀಟದಲ್ಲಿ ಪಕ್ಷಿಗಳ ಗರಿಗಳನ್ನು

ಜೋಡಿಸಿ ಕೈಯಲ್ಲಿ ಢಾಲು-ಖಡ್ಗ-ಬಿಲ್ಲು ಬಾಣಗಳನ್ನು ಧರಿಸಿ ಸೊಂಟಕ್ಕೆ ಚಿಕ್ಕಗಂಟೆ ಕಾಲಿಗೆ ಗೆಜ್ಜೆ ಕಟ್ಟಿ ಭಯಂಕರ ವೀರಾವೇಶದಿಂದ ಕೇಕೆ ಹಾಕಿ ರಭಸದಿಂದ ಕುಣಿಯುವನು. ಇವನ ಟೊಂಕಕ್ಕೆ ನಾಲ್ಕು ದಿಕ್ಕಿನಲ್ಲಿಯೂ ಹಗ್ಗ ಬಿಗಿದು ನಾಲ್ಕು ಜನರು ಅವನು ಕುಣಿದಂತೆ ಹಗ್ಗ ಹಿಡಿದು ಸಾಗುವರು. ಯಾವದೋ ಸೆರೆಸಿಕ್ಕ ಬೇಡರ ರಾಜನನ್ನು ಹಿಡಿದು ತರುವಂತೆ ಭಾಸವಾಗುವದು. ಸಿರಸಿ ಸೀಮೆಯಲ್ಲಿ ಬೇಡರ ಕುಣಿತ ಮಾಡುವಾಗ ಒಬ್ಬ ವಿಧವೆಯನ್ನು ಬೇಡರವನು ಅಡ್ಡಗಟ್ಟಿ ಕಾಡುವಂತೆಯೂ ಅವಳು ತಪ್ಪಿಸಿಕೊಳ್ಳುವಂತೆಯೂ ಅಭಿನಯಿಸುವರು.

ಬಿಂಗಿಪದ : ಮಲೆನಾಡಿನಲ್ಲಿ ಬಿಂಗಿಪದಕ್ಕೆ "ಅಂಟಿಕೆ ಪಂಟಿಕೆ" ಎಂದೂ ಕರೆಯುತ್ತಾರೆ. ಬಿಂಗಿಪದ ಹೇಳುವವರು ಕೈದೀಪ ಹಿಡಿದುಕೊಂಡು ದೀಪಾವಳಿ ಸಮಯದಲ್ಲಿ ಬೀದಿ ಬೀದಿ ಸುತ್ತುತ್ತಾರೆ. ಅತಿದೂರದವರೆಗೂ ಕೇಳುವ "ಸನ್ನೆ ಕೋಲು" ಎಂಬ ವಾದ್ಯವನ್ನು ಊದುತ್ತ ಮನೆಮನೆಗೆ ಬಿಂಗಿ ಮೇಳ ಬರುವದು. ಪದಹೇಳುವವರು ದೀಪವನ್ನು ಮುಂದಿಟ್ಟುಕೊಂಡು ಸಾಲಾಗಿ ಕುಳಿತುಕೊಳ್ಳುವರು. ಮನೆಯ ಯಜಮಾನ ಇವರು ಬಂದೊಡನೆ ಕಂಬಳಿಹಾಸಿ ದೀಪಹಚ್ಚಿ ಆತ್ಮೀಯತೆಯಿಂದ ಸ್ವಾಗತಿಸಿರುವನು. ಮೊದಲು ತಂಡದವರು ಬಲೀಂದ್ರನ ಪದಹೇಳಿ ನಂತರ ಇತರ ಪದಗಳನ್ನು ಹೇಳುತ್ತಿರುವಾಗ ಮನೆಯ ಯಜಮಾನ ಬಿಂಗಿತಂಡದವರು ತಂದ ದೀಪವನ್ನು ತನ್ನ ದೇವಕೋಣೆಗೆ ಒಯ್ದು ಅದರ ಒಂದೆರಡು

ಬತ್ತಿಗಳನ್ನು ತೆಗೆದು ತನ್ನ ದೇವರ ನಂದಾ ದೀಪಕ್ಕೂ ನಂದಾ ದೀಪದ ಬತ್ತಿಗಳನ್ನು ಬಿಂಗಿ ಕೈದೀಪಕ್ಕೂ ಬದಲಿಸಿ ಎರಡೂ ದೀಪಗಳಿಗೆ ಎಣ್ಣೆ ಹಾಕುವನು. ನಂತರ ತಂಡದ ಯಜಮಾನನಿಗೆ ದೀಪವನ್ನು ಮರಳಿಸುವಾಗ ಅಕ್ಕಿ, ಅವಲಕ್ಕಿ, ತೆಂಗಿನಕಾಯಿ, ನಾಣ್ಯಗಳ ಕಾಣಿಕೆ ಕೊಟ್ಟು ಕೈಮುಗಿಯುವನು. ಬಿಂಗಿಪದ ಹಾಡಿದರೆ ಬಲೀಂದ್ರ ಒಲಿದು ಸಕಲ ಇಷ್ಟಾರ್ಥಗಳನ್ನು ನೆರ ವೇರಿಸುವನೆಂಬ ಭಾವನೆ ಇದೆ. ಪ್ರತಿವರುಷವೂ ಬಿಂಗಿಯನ್ನು ಕಟ್ಟಲೇ ಬೇಕು. ದಾರಿಯಲ್ಲಿ ಬಿಂಗಿ ದೀಪ ಆರಬಾರದಂತೆ. ಆರಿ ದರೆ ಭಾರಿ ಅನಾಹುತ ಎಂಬ ಭಯ! ಅಲ್ಲದೇ ಎರಡು ಬಿಂಗಿ ಪದದ ಮೇಳ ಪರಸ್ಪರ ಎದುರಾಗಿ ಬರಬಾರದಂತೆ. ಅದ ರಿದಂಲೆ ಒಂದು ತಂಡದ ನೆಲೆ ಇನ್ನೊಂದು ತಂಡದವರಿಗೆ ತಿಳಿ ಯಲೆಂದು ತಂಡದವರು "ದೀಪಾಳಿ–ದೀಪಾಳಿ–ದೀಪಾಳ್ಯೋ" ಎಂದು ದಾರಿ ಸಾಗುವಾಗ ಆಗಾಗ ಕೂಗುತ್ತಾರೆ. "ಹಾಲು ಹಳ್ಳ್ಯಾಗಲಿ, ಬೆಟ್ಟ ಬೆಳ್ಯಾಗಲಿ, ಬೆಟ್ಟಕ್ಕೆ ಬಿಟ್ಟ ಕರು ತಪ್ಪದೇ ಮನೆ ಸೇರಲಿ, ದೀಪಾಳಿ-ದೀಪಾಳಿ - ದೀಪಾಳ್ಯೊ." ಶಿರಸಿ–ಸಿದ್ದಾಪುರ ತಾಲೂಕುಗಳಲ್ಲಿ ಬಿಂಗಿಪದ - ಕಥನ ಕವನಗಳು ಹೆಚ್ಚು ಪ್ರಚಾರದಲ್ಲಿವೆ.

ಅಲಗುಂ ಕುಣಿತ : ಶಿರಸಿ–ಯಲ್ಲಾಪುರ ತಾಲೂಕು-ಗಳಲ್ಲಿ ಸಿದ್ದಿ ಜನಾಂಗ ನೆಲೆಸಿದೆ. ನಿಗ್ರೋ ಮೂಲದ ಇವರಲ್ಲಿ ಹಿಂದುಗಳೂ ಇದ್ದಾರೆ, ಮುಸಲ್ಮಾನರೂ ಇದ್ದಾರೆ. ಸಿದ್ದಿಗಳದೇ ಆದ ವಿಶಿಷ್ಟ ಸಂಪ್ರದಾಯಗಳು, ಕಲೆಗಳು ಇವೆ. ಮುಸ್ಲಿಂ ಸಂಸ್ಕಾರದ ಸಿದ್ದಿಗಳಲ್ಲಿ ಅಲಗುಂ ಕುಣಿತ ರೂಢಿಯಲ್ಲಿದೆ.

ಪೀರದೇವರ ಉತ್ಸವದಲ್ಲಿ ಅಲಗುಂ ಕುಣಿತದ ಸೇವೆ ಸಲ್ಲುತ್ತದೆ. ಮೈತುಂಬ ಸೇಡಿಬಣ್ಣ ಹಚ್ಚಿಕೊಂಡು, ಅಂಗಿಚಡ್ಡಿ ಧರಿಸಿ, ಟೊಂಕಕ್ಕೆ ದನಕ್ಕೆ ಕಟ್ಟುವ ಗಂಟೆಗಳನ್ನು ಕಟ್ಟಿಕೊಂಡು ಕಾಲಿಗೆ ಗೆಜ್ಜೆಕಟ್ಟಿ, ತಲೆಯಲ್ಲಿ ಹಗ್ಗವನ್ನು ಉಂಗುರದಂತೆ ಹೆಣೆದು ಬಿದಿರಿನಕಡ್ಡಿಯ ತ್ರಿಕೋನದಿಂದ ಮಾಡಿದ ಟೊಪ್ಪಿಗೆಯನ್ನು ಧರಿಸಿ ಕುಣಿಯುತ್ತಾರೆ. ಈ ಕುಣಿತಕ್ಕೆ ಪ್ರತ್ಯೇಕ ವಾದ್ಯ ಬೇಕಿಲ್ಲ. ಟೊಂಕಕ್ಕೆ ಕಟ್ಟಿದ ಗಂಟೆ ಹಾಗು ಕುಣಿತದ ಗೆಜ್ಜೆ ಧ್ವನಿಯೇ ತಾಳದ ಗತ್ತನ್ನು ನೀಡುತ್ತವೆ. ಈ ಲಯಕ್ಕೆ ಸರಿಯಾಗಿ "ಅಲಿ-ಅಲಿ" ಎಂದು ಹೇಳುತ್ತ ತೀವ್ರಗತಿಯಲ್ಲಿ ರೌದ್ರವಾಗಿ ಕುಣಿದಾಗ ರಂಜನೀಯವಾಗಿರುವದು.

ಡಮಾಮಿ ಕುಣಿತ : ಹಿಂದು ಸಂಸ್ಕಾರದ ಸಿದ್ದಿಯರು ನವರಾತ್ರಿ ಯುಗಾದಿ ಮುಂತಾದ ಹಬ್ಬಗಳಲ್ಲಿ ಡಮಾಮಿ ಬಾರಿಸಿ ಕುಣಿಯುವರು. ಡಮಾಮಿ ಒಂದು ವಾದ್ಯವಿಶೇಷ. ಸರದಿ ಪ್ರಕಾರ ಇಬ್ಬಿಬ್ಬರು ಹೆಂಗಸರು ಸೇರಿ ಈ ಕುಣಿತ ಗೈಯುವರು; ಗಂಡಸರೂ ಪಾಲ್ಗೊಳ್ಳುವದುಂಟು. ಆವೇಶ ಪೂರಿತವಾಗಿ ಕುಣಿದಾಗ ಹೆಣ್ಣಿಗೆ ಮೈಮೇಲೆ "ಭಾರ" ಬರುವದುಂಟು. ದೈವಿಶಕ್ತಿಯಿದೆಂದು ತಿಳಿದ ಈ ಜನ ಪ್ರಶ್ನೆಕೇಳಿ ತಮ್ಮ ತೊಂದರೆಗೆ ಉಪಾಯ ಕಾಣುವರು. ಈ ಕುಣಿತದ ಪದಗಳು ತುಂಬಾ ಸರಳವಾಗಿರುವವು.

"ಬರಬರಗಾಳಿಯೆ-ಹುಡುಹುಡು ಮಳೆಯೇ ।
ಭೂಮಿಮೇಲ್ ಬೀಳ್ ಮಳೆಯೆ, ಏ ಮಳೆಯೆ ।
ಭೂಮಿಮೇಲ್ ಸುರಿಸುರಿ ಮಳೆಯೆ, ದಗ ದಗ
ಮಳೆಯೆ ।

ಬಡತನ ಬಂತು ಮಳೆಯೆ, ಏ ಮಳೆಯೆ, ಭೂಮಿಮೆಲ್
ಬೀಳ್ ಮಳೆಯೆ ॥"

ಡೊಳ್ಳು ಕುಣಿತ : ಡೊಳ್ಳು ಕುಣಿತ ಘಟ್ಟದ ಮೇಲಿನ ಗಂಡು ಕಲೆ. ಮರದಿಂದ ಮಾಡಿದ ದೊಡ್ಡ ಪಿಪಾಯಿ ಆಕಾರದ ಡೊಳ್ಳಿಗೆ ಎಡಭಾಗಕ್ಕೆ ಆಡಿನ ಚರ್ಮ ಹಾಗು ಬಲಭಾಗಕ್ಕೆ ಕುರಿಯ ಚರ್ಮ ಬಿಗಿದು ಬಲಗೈಯಿಂದ ಗುಣಿಬಡಿದು ಎಡಗೈ ಯಿಂದ ಆಡಿನ ಚರ್ಮಕ್ಕೆ ಹೊಡೆದು ಬಲವಾಗಿ ಬಾರಿಸುವರು. ಟೊಂಕಕ್ಕೆ ಡೊಳ್ಳನ್ನು ಕಟ್ಟಿಕೊಂಡು ವೃತ್ತಾಕಾರದಲ್ಲಿ ಇಲ್ಲವೆ ಒಬ್ಬರ ಹಿಂದೆ ಒಬ್ಬರು ನಿಂತು ಕಿವಿ ಗಡಚಿಕ್ಕುವಂತೆ ಡೊಳ್ಳಿನ ನಾದ ಮಾಡಿ ವಿಧವಿಧ ಕಸರತ್ತುಗಳನ್ನು ಮಾಡಿ ಮಣಿದು ಕುಣಿದು ಕುಪ್ಪಳಿಸುವ ಹುಮ್ಮಸ್ಸನ್ನು ಹೊಗಳಿದಷ್ಟೂ ಕಡಿಮೆಯೆ. ಡೊಳ್ಳಿನ ಕುಣಿತದಲ್ಲಿ ವೈವಿಧ್ಯಗಳಿದ್ದರೂ ಡೊಳ್ಳಿನ ಬಡಿತದ ಗತ್ತುಗಳಲ್ಲಿ ಹೆಚ್ಚಿನ ರೀತಿಗಳು ಇಲ್ಲದಿರುವದರಿಂದಲೇ "ದಿಲ್ಲಿಗೆ ಹೋದರೂ ಡೊಳ್ಳಿಗೆ ಒಂದೇ ಪೆಟ್ಟು" ಎಂಬ ನಾಣ್ಣುಡಿ ಹುಟ್ಟಿಕೊಂಡಿದೆ. ಡೊಳ್ಳಿನ ಪದಗಳು ವಿಪುಲವಾಗಿವೆ.

ಮಾರಿ ಕುಣಿತ : ಇದಕ್ಕೆ ದುರಗಿ ಮುರಗಿ ಕುಣಿತ ವೆಂದೂ ಹೆಸರಿದೆ. ಡರ ಡರ ಧ್ವನಿಯ ಡೋಲು ಬಡಿಯುತ್ತ ಮಾರಿ ಪೆಟ್ಟಿಗೆಯನ್ನು ಹೊತ್ತು ದಂಪತಿಗಳು ಊರಿಂದ ಊರಿಗೆ ಹೋಗುವರು. ನಾಲ್ಕು ಬೀದಿ ಕೂಡಿದಲ್ಲಿ ಮಾರಿ ಪೆಟ್ಟಿಗೆಯನ್ನು ತೆರೆದಿಟ್ಟು ಮರ್ಕಿಯಮ್ಮ (ಮಾರಿಯಮ್ಮ)ನ ಪೂಜೆಮಾಡಿ ಪೂಜಾ ಕುಣಿತವನ್ನು ಮಾಡುವರು. ಹೆಂಡತಿ ಡೋಲು ಬಾರಿಸುತ್ತಲಿರುವಳು. ಗಂಡನು ಬಾಯಲ್ಲಿ ಉದ್ದ-

ನೆಯು ಚಾಕು ಹಿಡಿದು ತನ್ನ ನಾಲಿಗೆ ಇಲ್ಲವೆ ಕೈಯನ್ನು ಘಾಯ ಗೊಳಿಸಿಕೊಂಡಂತೆ ಮಾರಿಗೆ ರಕ್ತತರ್ಪಣ ಕೊಟ್ಟಂತೆ ಕಲ್ಪನೆ ಹುಟ್ಟಿಸಿ ನಂತರ ಎಡಗೈಯಿಂದ ಗಂಟೆ ಬಾರಿಸುತ್ತ ಬಲಗೈಯಲ್ಲಿ ನಾರಿನ ಬಾರಕೋಲಿನಿಂದ ಬರಿಮೈಗೆ ಚಾಟಿ ಏಟನ್ನು "ಛಟ್ಟ" ಎಂಬ ಧ್ವನಿ ಹುಟ್ಟುವಂತೆ ಚಾಣಾಕ್ಷತನದಿಂದ ಹೊಡೆದು ಕೊಂಡು ಅಲ್ಲಿ ಸೇರಿದ ಜನರಲ್ಲಿ ಭಯಭಕ್ತಿ ಹುಟ್ಟಿಸಿ ದುರ್ಗಮ್ಮನ ಹೆಸರಿನಲ್ಲಿ ಬೇಡುವನು.

ಡೊಂಬರ ಕುಣಿತ : ಸಂಸಾರ ಸಮೇತ ಡೊಂಬರು ಡೋಲು-ಬಾರಿಸಿ ಜನರನ್ನು ಕೂಡಿಸಿ ತಮ್ಮ ಶಾರೀರಿಕ ಚಟು ವಟಿಕೆ, ಕೈಚಳಕ, ನಾನಾರೀತಿಯ ಕಸರತ್ತುಗಳನ್ನು ಪ್ರದರ್ಶಿ-ಸುವರು. ಕೆಲವು ಜಾದು ಹಾಗು ತಮಾಷೆಗಳನ್ನೂ ಮಾಡು ವರು. ಜನರನ್ನು ರಂಜಿಸಿ ಹೊಟ್ಟೆ ಹೊರಕೊಳ್ಳುವರು.

೧೧. ಬಸವನಾಟ

ಬಯಲುಸೀಮೆಯ ಜನ ಚೆನ್ನಾಗಿ ತರಬೇತಿ ಮಾಡಿದ ಬಸವ ಹಾಗು ಆಕಳನ್ನು ಸುಂದರವಾಗಿ ಶೃಂಗರಿಸಿಕೊಂಡು ಶಹನಾಯ್, ಡೋಲು ಬಾರಿಸುತ್ತ ಬೀದಿ ಬೀದಿ ತಿರುಗುವರು. ಅಲ್ಲಲ್ಲಿ ಬಸವನ-ಮದುವೆ ಆಟ ಪ್ರದರ್ಶಿಸುವರು. ಬಸವನ ಮದುವೆ ಆಟ ಬೀದಿ ನಾಟಕದ ಉತ್ತಮ ಮಾದರಿ ಎನ್ನ ಬಹುದು. ನಿಜವಾದ ಮದುವೆಯಲ್ಲಿ ನಡೆಯುವ ಹಾಸ್ಯಮಯ ಸನ್ನಿವೇಷಗಳ ಸಂಭಾಷಣೆಗಳನ್ನು ರಸವತ್ತಾಗಿ ಆಡುವರು. ಬಸವನನ್ನು "ರಾಮ" ನೆಂದು ಆಕಳನ್ನು "ಸೀತೆ" ಎಂದೂ

ಕರೆಯುವರು. ಸೀತೆಯ ತಂದೆಯ ಪಾತ್ರವಹಿಸುವವನೇ ಈ ಆಟದಲ್ಲಿಯ ಪ್ರಮುಖ ಪಾತ್ರಧಾರಿ. ಅವನೆ ಸಂಭಾಷಣೆಯ ಕೇಂದ್ರವ್ಯಕ್ತಿ. ಮೂಕಪ್ರಾಣಿಗಳಾದ ಬಸವ ಹಾಗು ಆಕಳು ಕೂಡ ತಮ್ಮ ಪಾತ್ರವನ್ನು ಯೋಗ್ಯರೀತಿಯಲ್ಲಿ ಅಭಿನಯಿಸುವ ರೀತಿ ಮೆಚ್ಚುವಂತದ್ದಾಗಿರುತ್ತದೆ. ಹಸುಗಳೊಡನೆ ನಿತ್ಯಸಹವಾಸದಲ್ಲಿರುವ ಹಳ್ಳಿಗರಿಗೆ ಬಸವನಾಟವೆಂದರೆ ಬಲು ಹಿಗ್ಗು. ಬಸವನ ಮೇಲಿದ್ದ ಭಕ್ತಿಯಿಂದ, ಪ್ರೇಮದಿಂದ ಹಳ್ಳಿಗರು ಬಸವನಾಟಮಾಡುವವರಿಗೆ ಧನ-ಧಾನ್ಯ-ಬಟ್ಟೆಗಳನ್ನು ನೀಡುವರು.

ಜೋಗಿ ಪದ : ತಂಬೂರಿ ಶೃತಿಗೆ ಹಾಡು ಹೇಳುತ್ತ ಜೋಗಿಗಳು ಭಿಕ್ಷುಕ ವೃತ್ತಿಯಿಂದ ಜೀವಿಸುವರು. ಜೋಗಿ ಜಂಗಮನಾಗಿ, ದಾಸಯ್ಯನಾಗಿ ಹಾಡು ಹೇಳುತ್ತ ತಂಬೂರಿ ಇಲ್ಲವೆ ಕಿನ್ನರಿ ಬಾರಿಸುತ್ತ ಬರುವದನ್ನು ಅಲ್ಲಲ್ಲಿ ಕಾಣಬಹುದು.

"ಜಂಗುಮ ಜಂಗುಮ ಜಂಗುಮನಲ್ಲೋ ಜಂಗುಮ
ಜಗಜೋಗಿ ಜಾಗುಮ ಜಂಗುಮನಲ್ಲೋ ಜಂಗುಮ
ಅವನ ಬಗಲಲ್ಲಿ ಕಂತೆಯೋ ಜಂಗುಮ
ಅವನ ಬಾಯಲ್ಲಿ ಪದನಾವೋ ಜಂಗುಮ
ಕಾಲಲ್ಲಿ ಕುಣಿತವೋ ಜಂಗುಮ ॥"

೧೨. ಯಕ್ಷಗಾನ

ಕನ್ನಡ ಕರಾವಳಿಯ ಹೆಮ್ಮೆಯ ಕಲೆ ಯಕ್ಷಗಾನ ತನ್ನ ಸತ್ವದಿಂದಾಗಿ ಕಲಾರಸಿಕರ ಕಣ್ಮನಗಳನ್ನು ಸೆಳೆದಿದೆ. ದೇಶ

ವಿದೇಶಗಳಲ್ಲಿ ಈ ಕಲೆಗೆ ಇಂದು ಕಲಾಗೌರವ ಸಲ್ಲುತ್ತದೆ. ನಟರಾಜನಿಗೆ ಇರುವ ಪಂಚಮುಖಗಳಂತೆ ಯಕ್ಷಗಾನಕ್ಕೂ ವಾದ್ಯ, ಹಾಡುಗಾರಿಕೆ, ಕುಣಿತ, ಬಣ್ಣಗಾರಿಕೆ (ವೇಷಭೂಷಣ) ಹಾಗು ಮಾತುಗಾರಿಕೆಗಳೆಂಬ ಐದು ಪ್ರಮುಖಾಂಗಗಳಿವೆ. ಯಕ್ಷಗಾನವು ಜನಪದ ವಿಶ್ವವಿದ್ಯಾಲಯ. ಶಾಸ್ತ್ರ, ಪುರಾಣ, ಜ್ಞಾನ, ಸಾಹಿತ್ಯ ಕಲೆಗಳಿಂದ ಕೂಡಿದ ಹಳ್ಳಿಗರ ನಾಟ್ಯವೇದ ಇದಾಗಿದೆ. ಈ ಯಕ್ಷಗಾನವು ತಮಿಳು, ಮರಾಠಿ ಹಾಗು ತೆಲಗು ಕಲೆಗಳ ಮೇಲೆ ಪ್ರಭಾವ ಬೀರಿದೆ ಎನ್ನಲಾಗುತ್ತಿದೆ.

ಯಕ್ಷಗಾನ ಎಂಬ ಹೆಸರು ತುಂಬಾ ವಿಚಾರಕ್ಕೆ ಎಡೆ ಮಾಡಿದೆ. ಯಕ್ಷಗಾನವು "ಎಕ್ಕಲಗಾಣ"ದ ಸಂಸ್ಕೃತೀಕರಣವೆ? ಅಥವಾ "ಜಕ್ಕ" ಪದ ಯಕ್ಷವಾಯಿತೆ ? ಇಲ್ಲವೆ ಯಕ್ಷ ಎಂಬುದು ಯಜ್ಞ ಮಾಡು, ಪೂಜಿಸು ಎಂಬ ಅರ್ಥದಿಂದ ಹುಟ್ಟಿಕೊಂಡಿತೆ ? ಗಂಧರ್ವಗಾನ ಎಂಬಂತೆ ಯಕ್ಷಗಾನ ಎಂಬುದೂ ಇನ್ನೊಂದು ಗಾನ ಪದ್ಧತಿಯ ಹೆಸರೆ ? ಏನೇ ಇದ್ದರೂ ಯಕ್ಷಗಾನ ಸಂಗೀತ ಪ್ರಧಾನ ರಂಗಕಲೆ. ಬಯಲಿನಲ್ಲಿ ನಡೆಯುವದರಿಂದ, ಬಯಲಾಟ; ಭಗವಂತನ ಲೀಲಾವಿನೋದಗಳನ್ನು ಪ್ರಥಮ ಪಾತ್ರಧಾರಿಯಾಗಿ ಸೂತ್ರಧಾರನಾಗಿ ಭಾಗವತನು ಆಡಿಸುವದರಿಂದ ಭಾಗವತರಾಟ; ವಿಷ್ಣುವಿನ ಹತ್ತಾವತಾರದ ಕತೆಗಳನ್ನು ನಿರೂಪಿಸುವದರಿಂದ ದಶಾವತಾರಾಟ; ಎಲ್ಲರೂ ಸೇರಿ ಮೇಳವಾಗಿ ಆಡುವದರಿಂದ ಮೇಳದಾಟ; ಹೀಗೆ ಬೇರೆ ಬೇರೆ ಹೆಸರಿನಿಂದ ಯಕ್ಷಗಾನ ಕರೆಯಲ್ಪಟ್ಟಿದೆ. ಯಕ್ಷಗಾನವು ತನ್ನದೇ ಆದ ಸಂಗೀತ ವಾದ್ಯ ವೈಖರಿ, ವೇಷಭೂಷಣಗಳ

ಬೆಡಗು, ನರ್ತನದ ಚೆಲುವು, ಮಾತಿನ ಮೋಡಿ, ಜಾಣ್ಮೆಯ ಪ್ರಸಂಗ ಪದಗಳ ಸೊಗಸುಗಾರಿಕೆಗಳಿಂದ ಒಡಗೂಡಿ ಜನಾದರಣೀಯ ಕಲೆಯಾಗಿ ಬೆಳೆದಿದೆ.

ಯಕ್ಷಗಾನ ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸಮಷ್ಟಿಕಲೆ. ದೇವರ ಪೂಜೆಗೆ ಕುಂಕುಮಾರ್ಚನೆ, ಸಂಗೀತಾರಾಧನೆ, ನೃತ್ಯಸೇವೆ ಮಾಡಿಸಿದಂತೆ ಯಕ್ಷಗಾನ ಬಯಲಾಟ ಆಡಿಸುವ ಸೇವೆಯೂ ದೇವಾಲಯದ ಸೇವಾ ವಿಧಾನಗಳಲ್ಲಿ ಒಂದಾಗಿದೆ. ಈ ಜಿಲ್ಲೆಯ ಹೊನ್ನಾವರ ತಾಲೂಕಿನ ಗುಂಡ ಬಾಳೆಯ ಹನುಮಂತ ದೇವರಿಗೆ ಯಕ್ಷಗಾನ ಸೇವೆ ಬಲು ಪ್ರಿಯ. ಬೇಸಿಗೆಯಲ್ಲಿ ನಾಲ್ಕೈದು ತಿಂಗಳು ಕಾಲ ಪ್ರತಿನಿತ್ಯ ಗುಂಡಬಾಳೆಯಲ್ಲಿ ಸೇವೆ ಆಟಗಳು ನಡೆಯುತ್ತಲೇ ಇರುವದು ಒಂದು ವಿಶೇಷವೆನ್ನಬಹುದು. ಯಕ್ಷಗಾನದ ಬಗ್ಗೆ ಇಂಥ ನೆಲೆ ಇನ್ನೊಂದಿಲ್ಲ. ಇನ್ನಿತರ ದೇವಾಲಯಗಳಲ್ಲಿ ವರುಷಕ್ಕೆ ಕೆಲವು ಹರಕೆ ಆಟಗಳು ನಡೆಯುವದಿದೆ. ಹಳ್ಳಿಹಳ್ಳಿಗಳಲ್ಲಿ ಹತ್ತಾರು ಬಯಲಾಟಗಳು ವರುಷವೂ ಆಗುತ್ತಲೆ ಇರುತ್ತವೆ. ಯಕ್ಷಗಾನ ಆಟವಾಡುವ ದಿನ ಸಂಜೆ ಸುತ್ತಲಿನ ಜನಕ್ಕೆ ಆಟದ ವಿಚಾರ ತಿಳಿಯಲೆಂದು "ಕೇಳಿ" ಹೊಡೆಯುತ್ತಾರೆ. ಬಣ್ಣದ ಚೌಕಿಯಲ್ಲಿ ಮೊದಲು ಗಜಮುಖದವಗೆ ಪ್ರಾರ್ಥನೆ ಸಲ್ಲಿಸಿ ಆರತಿ ಎತ್ತಿ ನಂತರ ಸಂಗೀತಗಾರ ಚಂಡೆಮದ್ದಳೆಯವಗೊಂದಿಗೆ ರಂಗಸ್ಥಳಕ್ಕೆ ಬಂದು ಅನುಕ್ರಮವಾಗಿ ಕೋಡಂಗಿ, ಬಾಲಗೋಪಾಲರು ಮತ್ತು ಸ್ತ್ರೀವೇಷದವರನ್ನು ದೇವರ ಸ್ತುತಿಯೊಡನೆ ಕುಣಿಸಿ ಕಥಾ ಪ್ರಾರಂಭಕ್ಕೆ ಅಣಿಮಾಡಿಕೊಡುವನು. ಸಂಗೀತಗಾರ

ಕುಣಿಸುವ ಈ ಮೊದಲಭಾಗಕ್ಕೆ ಸಭಾಲಕ್ಷಣ ಎನ್ನುವರು. ಇದಾದ ನಂತರ ಭಾಗವತನು ಆ ದಿನದ ಪ್ರಸಂಗದ ಪದಗಳನ್ನು ಭಾವಪೂರ್ಣವಾಗಿ ಕುಣಿತದ ತತ್ಕಾರಗಳ ಸಮೇತ ಹೇಳುತ್ತ ವೇಷಧಾರಿಗಳನ್ನು ಕುಣಿಸಿ ಕತೆಯನ್ನು ಮುಂದುವರಿಸುವನು. ಹೊಸ ಪಾತ್ರಗಳು ಬಂದಾಗ ಅವುಗಳನ್ನು ಸಭೆಗೆ ಪರಿಚಯಿ-ಸುವದು ಹಾಗು ಅವಶ್ಯವಿದ್ದಲ್ಲಿ ಪಾತ್ರಗಳ ಸಂಗಡ ಸಂಭಾಷಣೆ ನಡೆಸುವದು ಭಾಗವತನ ಕಾರ್ಯವೇ ಆಗಿದೆ. ವೇಷಧಾರಿ ಭಾಗವತರ ಹಾಡಿಗೆ ಸರಿಯಾಗಿ ಅಭಿನಯಿಸಿ ಕುಣಿದು ಪ್ರಸಂ-ಗದ ಪದದ ಅರ್ಥವನ್ನು ರಸವತ್ತಾದ ಮಾತಿನಿಂದ ವಿವರಿಸಿ ಪಾತ್ರದ ಪೋಷಣೆಗೈದು ಕತೆಯನ್ನು ಮುನ್ನಡಿಸುವನು. ನಟರ ಅಭಿನಯ, ಕುಣಿತ, ಮಾತುಗಾರಿಕೆ, ವೇಷಭೂಷಣ ಗಳಿಂದ ಹಾಗು ಭಾಗವತರ ಹಾಡುಗಾರಿಕೆ, ಚೆಂಡೆಮುದ್ದಳೆ ಗಾರರ ಕೈಚಳಕಗಳ ಹೊಗಸಾದ ಸಮ್ಮೇಳದಿಂದ ಆಟಕ್ಕೆ ಕಳೆ ಯೇರಿ ಆಟ ಬೆಳತನಕ ಸಾಗುತ್ತದೆ.

ಯಕ್ಷಗಾನ ಆಟಕ್ಕೆ ಪೂರಕವಾದ ಯಕ್ಷಗಾನ ಸಾಹಿತ್ಯವೂ ಈ ಜಿಲ್ಲೆಯಲ್ಲಿ ಶ್ರೀಮಂತವಾಗಿ ಬೆಳೆದು ಬಂದಿದೆ. ಪ್ರಾಚೀನ ವಾದ, ಕೆಲವು ತಾಡೋಲೆ ಪ್ರತಿಗಳು ಇಲ್ಲಿ ಉಪಲಬ್ಧವಿವೆ. ಓಲೆಗರಿಗಳಲ್ಲಿ ಬರೆಯಲ್ಪಡದೆ ಬಾಯಿಂದ ಬಾಯಿಗೆ ಹರಿದು ಬಂದು ಇಂದು ಮಾಯವಾಗಿರುವ ಕೃತಿಗಳು ನೂರಾರು. ಇವುಗಳಲ್ಲಿ ಕೆಲವು ಮಾತ್ರ ಅಚ್ಚಾಗಿವೆ. ಪೂರ್ವದ ಯಕ್ಷ ಗಾನ ಕವಿಗಳಲ್ಲಿ ಗೇರಸೊಪ್ಪೆ ಸಾಂತಪ್ಪಯ್ಯ, ನಗರೆ ಸುಬ್ರಹ್ಮಣ್ಯ, ಎಣ್ಣೆಮಡಿ ವೆಂಕಟರಮಣಯ್ಯ, ಅಗ್ರಹಾರದ

ವಿಷ್ಣು ಸಭಾಹಿತ ಮೊದಲಾದವರು ಪ್ರಮುಖರಾಗಿದ್ದಾರೆ. ಇವರ ದಾರಿಯಲ್ಲಿಯೇ ಮುನ್ನಡೆದು ಉತ್ತಮ ಯಕ್ಷಗಾನ ಪ್ರಸಂಗಗಳನ್ನು ಅನೇಕರು ರಚಿಸಿದ್ದಾರೆ. ಇಂದು ಕೂಡ ಈ ಜಿಲ್ಲೆಯಲ್ಲಿ ಹೊಸ್ತೋಟ ಮಂಜುನಾಥ ಹೆಗಡೆ, ಕಡತೋಕಾ ಮಂಜುನಾಥ ಭಾಗ್ವತ, ತಿಮ್ಮಪ್ಪ ಹೆಗಡೆ, ಮಾಸ್ಕೇರಿ ತಿಮ್ಮಣ್ಣ ನಾಯಕ, ಎಂ. ಜಿ. ಬರವಣಿ ಗೋಕರ್ಣ, ಹಿತ್ತಲಹಳ್ಳಿ ಅನಂತ ಭಟ್ಟ ಮೊದಲಾದವರು ಪ್ರಸಂಗಗಳನ್ನು ಗುಣಮಟ್ಟದಲ್ಲಿ ಹಾಗು ಸಂಖ್ಯಾಮಟ್ಟದಲ್ಲಿ ಹೆಚ್ಚಿಸಿದ್ದಾರೆ. ಡಾ॥ ಶಿವರಾಮ ಕಾರಂತರು "ಯಕ್ಷಗಾನ ಬಯಲಾಟ" ಗ್ರಂಥ ವನ್ನು ಬರೆದು ಪ್ರಕಟಿಸುವದಕ್ಕಿಂತ ಹಲವು ವರ್ಷ ಮೊದಲೇ ಈ ಜಿಲ್ಲೆಯ ಶ್ರೀ ಕೃಷ್ಣ ಭಂಡಾರಿಯವರ "ಯಕ್ಷಗಾನ ಕೈಪಿಡಿ" ಹಾಗು ಶ್ರೀ ರಾ. ಭ. ಹಾಸಣಗಿಯವರ "ಯಕ್ಷ ನಾಟಕಗಳು" ಎಂಬ ಯಕ್ಷಗಾನ ಗ್ರಂಥಗಳು ಪ್ರಕಟವಾಗಿವೆ. ಯಕ್ಷಗಾನ ಕಲೆಯ ಕುರಿತೇ ಇಲ್ಲಿ "ಯಕ್ಷಗಾನ" ಎಂಬ ಮಾಸ ಪತ್ರಿಕೆ ಪ್ರಕಟವಾಯಿತು. ಮೊಟ್ಟ ಮೊದಲನೇ ಯಕ್ಷಗಾನ ಸಮ್ಮೇಲನವು ಈ ಜಿಲ್ಲೆಯಲ್ಲೇ ಜರುಗಿತು. ಈಗಲೂ ಅಲ್ಲಲ್ಲಿ ಯಕ್ಷಗಾನ ವಿಚಾರಗೋಷ್ಠಿ–ಸಮ್ಮೇಳನಗಳು ಜರಗುತ್ತಿವೆ. ಯಕ್ಷಗಾನದ ಸಭಾಲಕ್ಷಣವನ್ನು ಸಾಹಿತ್ಯಬದ್ಧವಾಗಿ ರೂಪಿಸಿದವರು ಇಲ್ಲಿಯವರು. ಹೀಗೆ ಯಕ್ಷಗಾನ ಸಾಹಿತ್ಯಕ್ಕೆ ಈ ಜಿಲ್ಲೆಯ ಕಾಣಿಕೆ ಹಿರಿದಾಗಿದೆ.

ಉತ್ತರ ಕನ್ನಡದ ಯಕ್ಷಗಾನ ಶೈಲಿಗೆ ಬಡುಗು–ತಿಟ್ಟು ಎಂದು ಕರೆಯುತ್ತಾರೆ. ಮದ್ದಳೆ, ತಾಳ, ಚಂಡೆ (ತಾಸೆ) ಹಾಗು

ಶ್ರುತಿ ಇವು ಹಿನ್ನೆಲೆಯ ವಾದ್ಯಗಳು, ಭಾಗವತರ ಹಾಡುಗಾರಿಕೆ ಸೊಗಸಾಗಿರುತ್ತದೆ. ಕುಣಿತಗಳ ವಿವಿಧ ಕ್ರಮ ತತ್ಕಾರಗಳು ಸುಂದರವಾಗಿರುತ್ತವೆ. ಪಾತ್ರ ಪ್ರವೇಶವನ್ನು ತೆರೆಯ ಕುಣಿತದಿಂದ ಮಾಡುವ ಪರಿಪಾಠವಿದೆ. ತೆರೆಯ ಹಿಂದೆ ಪಾತ್ರಧಾರಿ ಮೊದಲು ಭಾಗವತರೆಡೆಗೆ ಮುಖಮಾಡಿ ಕುಣಿದು ನಂತರ ಪ್ರೇಕ್ಷಕರ ಕಡೆಗೆ ತಿರುಗಿ ಕುಣಿದು ತೆರೆ ಸರಿಸಿ ರಂಗಪ್ರವೇಶ ಮಾಡುವನು. ಪಾಂಡವರ ಒಡ್ಡೋಲಗ, ಇಂದ್ರನ ಒಡ್ಡೋ-ಲಗ, ಕಿರಾತ-ಹನುಮಂತ-ಕೃಷ್ಣ ಮೊದಲಾದ ಪಾತ್ರಗಳ ಪ್ರವೇಶ ಕುಣಿತಗಳು ವೈವಿಧ್ಯಮಯವಾಗಿವೆ. ರಾಕ್ಷಸನ ಪ್ರವೇಶ ಕುಣಿತದಲ್ಲಿ ಮುಖಮಾರ್ಜನ, ಸ್ನಾನ, ಗಂಧಲೇಪನ, ಲಿಂಗಪೂಜೆ, ಸಂಧ್ಯಾವಂದನೆ ಮಾಡುವ ರೂಢಿ ಇದೆ. ಪ್ರಯಾಣ, ಬೇಟೆ, ಯುದ್ಧ, ವನವಿಹಾರಾದಿಗಳನ್ನು ತೋರುವ ನಾನಾ ಬಗೆಯ ಕುಣಿತಗಳಿವೆ. ರಾಣಿಯರ ಲಾಸ್ಯದ ಕುಣಿತದ ಪರಿಯೇ ಬೇರೆ. ರಾಜರ "ಲಾಲಿ" ಕುಣಿತವೆಂಬುದುಂಟು. ಬಯಲಿನಿಂದ ಬರುವ ಪಾತ್ರಗಳನ್ನು "ಲಾಲಿ-ಲೋಂ-ಲಾಲಿ" ಎಂದು ಹಾಡಿ ಕುಣಿಸುವ ಪದ್ಧತಿ ಇದೆ. ಇಂದ್ರನ ಒಡ್ಡೋಲಗವನ್ನು ರಂಗಸ್ಥಳದಲ್ಲಿ ಅಟ್ಟಕಟ್ಟಿ ಅಟ್ಟದ ಮೇಲೆ ಮಾಡುತ್ತಿದ್ದರು. ಇಂದು ಈ ಕುಣಿತಗಳಲ್ಲಿ ಕೆಲವು ನಟರ ಅಭ್ಯಾಸ ಬಲ ಸಾಲದೆ ಮಾಯವಾಗುತ್ತಲಿವೆ.

ಯಕ್ಷಗಾನ ಕುಣಿತದಲ್ಲಿ ನೃತ್-ನೃತ್ಯ-ನರ್ತನಗಳೆಲ್ಲವಕ್ಕೂ ಎಡೆ ಇದೆ. ಈ ಶಾಸ್ತ್ರೀಯ ಪ್ರಕಾರಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಪ್ರವೇಶ ಕುಣಿತ, ಒಡ್ಡೋಲಗ, ದಿಗಣ,

ಲಾಲಿ ಮುಂತಾದ ನೃತ್‌ರೂಪ, ವಿವಿಧಪಾತ್ರಗಳ ಭಾವ ಪೂರ್ವಕ ಕುಣಿತಗಳಲ್ಲಿ ನೃತ್ಯರೂಪ ಹಾಗು ಜಲಕ್ರೀಡೆ, ಬೇಟೆ, ಯುದ್ಧ ಮೊದಲಾದವುಗಳ ನರ್ತನರೂಪಗಳನ್ನು ಕಾಣ ಬಹುದು.

ಯಕ್ಷಗಾನದ ಮಾತುಗಾರಿಕೆ ಹಿತಮಿತವಾಗಿ, ರಸವ-ತ್ತಾಗಿ ,ಅರ್ಥವತ್ತಾಗಿದ್ದಾಗ ರಸಿಕರ ಮನ ಸೆಳೆಯುತ್ತದೆ. ಈ ಜಿಲ್ಲೆಯಲ್ಲಿ ಉತ್ತಮ ಮಾತುಗಾರಿಕೆಯನ್ನು ರೂಢಿಸಿಕೊಂಡ ಅನೇಕ ಕಲಾವಿದರಿದ್ದಾರೆ.

ವೇಷಭೂಷಣದ ದೃಷ್ಟಿಯಿಂದ ವಿಚಾರ ಮಾಡಿದಾಗ ಜಾಗತಿಕ ಕಲಾಪ್ರಪಂಚದಲ್ಲಿಯೇ ಯಕ್ಷಗಾನದ ವೇಷಭೂಷಣ ಗಳು ತುಂಬಾ ಆಕರ್ಷಕವಾಗಿವೆ ಎಂದು ನನ್ನ ಅಭಿಪ್ರಾಯ. ಈ ವೇಷ-ಭೂಷಣಗಳು ನಮ್ಮನ್ನು ಅತಿಮಾನವ ಅದ್ಭುತ ಪ್ರಪಂಚದತ್ತ ಕೊಂಡೊಯ್ಯುತ್ತವೆ. ಪಾತ್ರ ಉಡಿಗೆತೊಡಿಗೆ, ಕೇಶ ಶೃಂಗಾರ, ಮುಖದ ಬಣ್ಣಗಾರಿಕೆ ಎಲ್ಲವು ವಿಶಿಷ್ಟ ವಾಗಿದ್ದು ಕಲಾತ್ಮಕವಾಗಿವೆ. ಯಕ್ಷಗಾನದ ಕಿರೀಟ, ಮುಂಡಾಸು (ಪಗಡೆ), ಮುಂದಲೆ, ಕರ್ಣಪತ್ರ, ಕೊರಳಡ್ಡಿಗೆ, ಎದೆಕಟ್ಟು, ಭುಜಕೀರ್ತಿ, ತೋಳ ಬಾಪುರಿ, ವದ್ಯಾಣ, ಕೈಚಿನ್ನ ಕಾಲ್ಗಡಗ, ವೀರಕಸೆ, ತುರಾಯಿ ಮುಂತಾದವುಗಳಿಂದ ಒಪ್ಪುವ ಪಾತ್ರಗಳನ್ನು ರಂಗದಲ್ಲಿ ಕಂಡಾಗ ಅಲೌಕಿಕ ರಸಾನುಭವವಾಗು ವದು. ಯಕ್ಷಗಾನವಿಂದು ವಿದೇಶಿಯರ ಗಮನ ಸೆಳೆದಿದ್ದರೆ ಅದಕ್ಕೆ ಅದರ ವೇಷಭೂಷಣ ಹಾಗು ನೃತ್ಯವೈಖರಿಗಳ ಕಾರಣ ದಿಂದ ಎನ್ನಬಹುದು.

ಕೇವಲ ಪಂಚ ಹಸ್ತೇನ ವಿಸ್ತೀರ್ಣ ರಂಗಸ್ಥಳದಲ್ಲಿ ಅತಳ ವಿತಳ, ಸುತಳ, ರಸಾತಳ, ಸ್ವರ್ಗ, ಮರ್ತ್ಯ, ಪಾತಾಳಾದಿ ಹದಿನಾಲ್ಕು ಲೋಕಗಳನ್ನು, ಅಂಗ-ವಂಗ ಕಳಿಂಗಾದಿ ಐವತ್ತಾರು ದೇಶಗಳ ಸಕಲ ಸಾಹಸ ಸೌಂದರ್ಯಗಳನ್ನು ಸೆರೆಹಿಡಿದು ಪ್ರದರ್ಶಿಸುವ ಮಾಂತ್ರಿಕ ಶಕ್ತಿ ಈ ಕಲೆಗಿದೆ. ಉತ್ತರ ಕನ್ನಡವು ಯಕ್ಷಗಾನದ ತೌರಾಗಿದ್ದು ಅನೇಕ ಶ್ರೇಷ್ಠ ಕಲಾವಿದರನ್ನು ಮೇಳಗಳನ್ನು ಹೊಂದಿದ್ದ ನೆಲವಾಗಿದೆ. ಈ ಜಿಲ್ಲೆಯ ಕರ್ಕಿ ಊರಿನ ಮೇಳವೊಂದು ೧೮೪೨ ರಲ್ಲಿ ಸಾಂಗ್ಲಿಗೆ ಹೋಗಿ ಅಲ್ಲಿಯ ರಾಜರನ್ನು ಜನತೆಯನ್ನು ಸಂತುಷ್ಟಿಗೊಳಿಸಿ ಕಾಣಿಕೆ ಪಡೆದು ಬಂದುದಲ್ಲದೆ ಇದರ ಸ್ಫೂರ್ತಿಯಿಂದ ಮರಾಠಿಯ ಮೊದಲ ನಾಟಕವು ಹುಟ್ಟಿಕೊಂಡಿತು ಎಂಬುದು ಹೆಮ್ಮೆಯ ವಿಷಯ. ದಿ॥ ಮೂಡ್ಕಣಿ ನಾರಾಯಣ ಹೆಗಡೆಯವರ ತಂದೆ ದಿ॥ ರಾಮ ಹೆಗಡೆಯವರು ಮೈಸೂರು, ರಾಮದುರ್ಗ, ನರಗುಂದ ಮೊದಲಾದ ಊರುಗಳಲ್ಲಿ ಯಕ್ಷಗಾನ ಪ್ರದರ್ಶಿಸಿದ್ದರು. ಭಾರತದ ತುಂಬೆಲ್ಲ ಮೊದ ಮೊದಲು ಯಕ್ಷಗಾನವನ್ನು ಕಾಣಿಸಿದ ಕೀರ್ತಿ ಕರ್ಕಿಯ ಹಾಸ್ಯಗಾರ ಮೇಳ ಹಾಗು ಕೆರೆಮನೆ ಮೇಳದವರಿಗೆ ಸಲ್ಲಬೇಕು. ಪ್ರಪ್ರಥಮವಾಗಿ ಯಕ್ಷಗಾನಕಲೆಗೆ ರಾಷ್ಟ್ರಪ್ರಶಸ್ತಿ ದೊರೆತದ್ದು ಈ ಜಿಲ್ಲೆಯ ಹೆಸರಾಂತ ಕಲಾವಿದ ಶ್ರೀ ಶಿವರಾಮ ಹೆಗಡೆ ಕೆರೆಮನೆಯವರಿಗೆ. ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ ಮೇಳವೆ ಪರದೇಶಕ್ಕೆ ಪೂರ್ಣಮೇಳವಾಗಿ ಹೋಗಿ ಪ್ರದರ್ಶನ ಗೈದು ಬಂದ ಪ್ರಥಮ ಮೇಳ. ಇಂದು ನಾಡಿನಲ್ಲಿ ಶ್ರೇಷ್ಠ ಕಲಾವಿದರಾದ ಶ್ರೀ ಶಂಭುಹೆಗಡೆ ಕೆರೆಮನೆ, ಮಹಾಬಲ ಹೆಗಡೆ ಕೆರೆಮನೆ,

ಚಿಟ್ಟಾಣಿ ರಾಮಚಂದ್ರ, ಜಲವಳ್ಳಿ ವೆಂಕಟೇಶ, ಕೃಷ್ಣ ಯಾಜಿ, ಗೋಡೆ ನಾರಾಯಣ ಹೆಗಡೆ, ಗೋವಿಂದ ನಾಯಕ, ಭಾಸ್ಕರ ಜೋಶಿ, ತಿಮ್ಮಣ್ಣ ನಾಯಕ ಮಾಸ್ಕೇರಿ, ವೆಂಕಟರಮಣ ನಾಯಕ ಹಿರೇಗುತ್ತಿ, ಕೊಂಡದಕುಳಿ ರಾಮ ಹೆಗಡೆ, ಪರಮಯ್ಯ ಹಾಸ್ಯಗಾರ, ದೇವರು ಹೆಗಡೆ: ಎಂ. ಎಂ. ನಾಯಕ ಅಗ್ರಗೋಣ ಮೊದಲಾದವರು ಈ ಜಿಲ್ಲೆಯವರೇ ಆಗಿದ್ದಾರೆ. ಹಿಂದೆ ಅಂಕೋಲೆಯಲ್ಲಿದ್ದ ಸುಬೋಧ ಯಕ್ಷಗಾನ ಮೇಳದ ಶ್ರೀ ಸಣ್ಣ ಮೋನಪ್ಪ ನಾಯಕ, ಭಾವಿಕೇರಿ ರಾಮನಾಯಕ, ಶೆಟಗೇರಿ ಜೋಗಿ ನಾಯಕ ಮೊದಲಾದ ಪ್ರಸಿದ್ಧ ನಟರನ್ನು ಜನ ಇಂದಿಗೂ ನೆನೆಯುತ್ತಾರೆ. ಕುಮಟೆ-ಶಿರಸಿ-ಯಲ್ಲಾಪುರ, ಹೊನ್ನಾವರ ತಾಲೂಕುಗಳಲ್ಲಿ ಕೆಲವು ಮೇಳಗಳು ಸಂಘಟಿಸಲ್ಪಟ್ಟು ಉತ್ತಮ ಯಕ್ಷಗಾನ ಕಲಾ ಪ್ರತೀಕಗಳಾಗಿದ್ದವು. ಇಂದಿಗೂ ಯಕ್ಷಗಾನದ ಶ್ರೇಷ್ಠ ಕಲಾ ಪರಂಪರೆಯನ್ನು ಉತ್ತರ ಕನ್ನಡ ಕಾಯ್ದಿಟ್ಟುಕೊಂಡಿದೆ.

ತಾಳ ಮದ್ದಲೆ : ಮಳೆಗಾಲದಲ್ಲಿ ವಿಶೇಷವಾಗಿ ನಡೆಸುವ ತಾಳಮದ್ದಲೆಯ ಕಾರ್ಯಕ್ರಮವು ವೇಷಭೂಷಣ-ನರ್ತನಗಳನ್ನು ಬಿಟ್ಟ ಯಕ್ಷಗಾನದ ಇನ್ನೊಂದು ಪದ್ಧತಿಯೆನ್ನ-ಬಹುದು. ಭಾಗವತನ ಹಿನ್ನೆಲೆಯ ಪದಕ್ಕೆ ಪಾತ್ರಧಾರಿಗಳು ಕುಳಿತದಲ್ಲಿಯೆ ಸಂಭಾಷಣೆಗಳ ಮೂಲಕ ಪ್ರಸಂಗದ ಕತೆಯನ್ನು ನಿರೂಪಿಸುತ್ತಾರೆ ಅತ್ಯುತ್ತಮವಾಗಿ ಅರ್ಥವನ್ನು ಹೇಳುವ ಪ್ರಸಿದ್ಧ ಅರ್ಥಧಾರಿಗಳು ಈ ಜಿಲ್ಲೆಯಲ್ಲಿ ಇದ್ದಾರೆ. ಬುದ್ಧಿಜೀವಿಗಳಿಗೆ ಈ ಕಾರ್ಯಕ್ರಮ ಪ್ರಿಯವಾಗಿರುತ್ತದೆ ಘಟ್ಟದ

ಮೇಲಿನ ಸೀಮೆಯಲ್ಲಿ ಭಾಗವತರು ಹಾಡುವಾಗ ಅರ್ಥಧಾರಿಗಳು ಕುಳಿತಲ್ಲಿಯೇ ಅಭಿನಯಗೈಯುವದನ್ನೂ ಕಾಣಬಹುದು.

ಸಿಂಹನೃತ್ಯ : ಯಕ್ಷಗಾನದಲ್ಲಿಯೇ ರೂಪುಗೊಂಡ ಸಿಂಹನೃತ್ಯ ಹಾಗು ಪ್ರೇತ–ನೃತ್ಯಗಳು ಈ ಜಿಲ್ಲೆಯಲ್ಲಿ ಇತ್ತೀಚೆಗಷ್ಟೇ ಹೆಚ್ಚು ಪ್ರಚಾರದಲ್ಲಿ ಬಂದವು. ಯಕ್ಷಗಾನದಲ್ಲಿ ಸಿಂಹ ವೇಷಕ್ಕೆ ಹೆಸರಾದ ಶ್ರೀ ಧಾರೇಶ್ವರ ಸುಬ್ಬನ ಸಿಂಹವನ್ನು ಸಭೆ ಸಮ್ಮೇಳನಗಳಲ್ಲಿ ಕಲಾಪ್ರಿಯರು ನೋಡ ಬಯಸಿದ್ದರಿಂದ ಈ ಕುಣಿತ ಪ್ರಚಾರಕ್ಕೆ ಬಂತು. ಮುಖವನ್ನು ಕೇವಲ ಬಣ್ಣಗಾರಿಕೆಯಿಂದ ಸಿಂಹದಂತೆ ಮಾರ್ಪಡಿಸಿಕೊಂಡು ಮೈಗೆ ನಾರಿನ ಅಂಗಿತೊಟ್ಟು ನಿಜ ಸಿಂಹದಂತೆ ಕಾಣುವ ಶ್ರೀ ಧಾರೇಶ್ವರ ಸುಬ್ಬನ ಸಿಂಹದ ಕುಣಿತವು ಅದ್ಭುತ ಅವಿಸ್ಮರಣೀಯ ಕಲೆಯಾಗಿದೆ. ಸಿಂಹ ಗವಿಯಿಂದ ಹೊರಬೀಳುವದು, ಸಂಚರಿಸುವದು, ಬೇಟೆಯನ್ನು ಕಾಣುವದು, ಬೇಟೆಯನ್ನು ಹಿಡಿದು ತಿನ್ನುವದು, ಹಾಯಾಗಿ ಮಲಗುವದು ಮೊದಲಾದ ಪರಿಯನ್ನು ನೈಜತೆಗೆ ತೀರ ಹತ್ತಿರವಿದ್ದಂತೆ ಅಭಿನಯಿಸುವರು.

ಪ್ರೇತ ನೃತ್ಯ : ಮೈಗೆ ಪೂರ್ಣ ಕಪ್ಪು ಬಣ್ಣ ಬಳಿದು ಅಸ್ಥಿಗಳನ್ನು ಮಾತ್ರ ಬಿಳೀ ಬಣ್ಣದಿಂದ ಬರೆದು ಕಪ್ಪಾದ ಪರದೆಯ ಹಿನ್ನೆಲೆಯಲ್ಲಿ ಮಂದ ಬೆಳಕಿನಲ್ಲಿ ಧೂಪದ ಹೊಗೆಯ ಮಧ್ಯದಿಂದ ಮೇಲೆದ್ದು ಬರುವ ಎಲುವಿನ ಹಂದರದ ವೇಷ ಕುಣಿದಾಗ ಮೈನವಿರೇಳುವದು. ಈ ಕುಣಿತಕ್ಕೆ ಶ್ರೀ ಹಾಸ್ಯಗಾರ ಕೃಷ್ಣರು ತುಂಬಾ ಪ್ರಸಿದ್ಧರಲ್ಲದೆ ಅವರಿಂದಾಗಿಯೇ ಈ ನೃತ್ಯ ಹೆಚ್ಚು ಪ್ರಚಾರದಲ್ಲಿ ಬಂದಿತು.

೧೩. ಸಣ್ಣಾಟಗಳು

ಯಕ್ಷಗಾನವು ಪಡುವಲಪಾಯವೆಂದು ಕರೆಸಿಕೊಳ್ಳುತ್ತಿ-ದ್ದರೆ ಮೂಡಲಪಾಯವೆಂದು ಕರೆಸಿಕೊಳ್ಳುವ ಆಟಗಳಲ್ಲಿ ದೊಡ್ಡಾಟ ಮತ್ತು ಸಣ್ಣಾಟಗಳೆಂಬ ಎರಡು ಪ್ರಕಾರಗಳುಂಟು. ದೊಡ್ಡಾಟದಲ್ಲಿ ಕಾಣುವ ರಂಗಸಜ್ಜಿಕೆ ವೇಷಭೂಷಣಗಳು ಸಣ್ಣಾಟಗಳಲ್ಲಿಲ್ಲ. ಲಘು ಸಂಗೀತ, ಚಟುಲಗತಿ, ದಿಡಗಿನ ಕುಣಿತ ಮೊದಲಾದ ಲಕ್ಷಣದಿಂದ ಕೂಡಿದ ಸಣ್ಣಾಟದಲ್ಲಿ ಸಾಮಾಜಿಕ ಕತೆಗಳು, ಭಕ್ತಿಕತೆಗಳು ಪ್ರಧಾನವಸ್ತುಗಳಾಗಿರು-ತ್ತವೆ. **ಸಂಗ್ಯಾಬಾಳ್ಯಾ, ಗುಂಡುಬರನು ನ ಕತೆ,** ಸೋಮಯ್ಯ ಭೀಮಯ್ಯ ಕತೆ ಮೊದಲಾದ ಕತೆಗಳನ್ನು ಈ ಜಿಲ್ಲೆಯಲ್ಲಿ ಆಡುವರು. ಇವುಗಳಲ್ಲಿ ಸಂಗ್ಯಾಬಾಳ್ಯಾ ಕತೆ ತುಂಬಾ ಪ್ರಚಾರದಲ್ಲಿದೆ. ಪರ ಜಿಲ್ಲೆಯಿಂದ ಬಂದ ಕಲೆ ಸಣ್ಣಾಟವಾಗಿ-ದ್ದರೂ ಸಂಗ್ಯಾಬಾಳ್ಯಾನಂಥ ಕತೆಗಳನ್ನು ಆಡುವದರಲ್ಲಿ ಈ ಜಿಲ್ಲೆಯ ಹಾಲಕ್ಕಿ ಒಕ್ಕಲು, ಆಗೇರರು, ಹಳ್ಳೇರರೇ ಮೊದ-ಲಾದವರು ಸಾಕಷ್ಟು ಪರಿಣತಿ ಪಡೆದಿದ್ದಾರೆ.

ಭಜನಾ ಬಾರೋಡ : ಕಾರವಾರ ತಾಲೂಕಿನ ಉತ್ತರ ಭಾಗದಲ್ಲಿ ಮರಾಠಿ ಪ್ರಭಾವದ ಭಜನೆಯ ಧಾಟಿಯಲ್ಲಿ ಹಿಮ್ಮೇಳ ವಿದ್ದ ಬಯಲಾಟಗಳು ನಡೆಯುವವು. ಭಾಗವತನು ಹಾಡುವ ಹಾಡಿಗೆ ಸಣ್ಣಾಟದಲ್ಲಿ ಕುಣಿದಂತೆ ಕಿರಿಹೆಜ್ಜೆಯನಿಟ್ಟು ಕುಣಿ-ಯುತ್ತಾ ವೇಷಧಾರಿಗಳು ಬಾಯಿಪಾಠ ಮಾಡಿದ ಮಾತುಗಳನ್ನು ಆಡುವರು. ಪ್ರಾರಂಭದಲ್ಲಿ ಗಣೇಶ ಸ್ತುತಿ ಹಾಗು ವಿಠ್ಠಲನ

ಭಜನೆಮಾಡಿ ಪೌರಾಣಿಕ ಕತೆಗಳನ್ನು ಇಲ್ಲವೇ ಸಖೂಬಾಯಿ, ತುಕಾರಾಮ್ ಮೊದಲಾದ ಸಂತರ ಕತೆಗಳನ್ನು ಅಭಿನಯಿಸುವರು. ಹಿನ್ನೆಲೆಯ ವಾದ್ಯವೆಂದು ಹಾರ್ಮೋನಿಯಂ, ತಬಲಾ, ತಾಳಗಳನ್ನು ಬಳಸುವರು.

೧೪. ಗುಡಿಗಾರಿಕೆ-ಶಿಲ್ಪ-ಚಿತ್ರ

ಗಂಧದ ಹಾಗು ಇತರ ಮರದ ಕೆತ್ತನೆ ಮಾಡುತ್ತಿರುವ ಇಲ್ಲಿಯ ಗುಡಗಾರರ ಕಲೆ ಜಗತ್ ಪ್ರಸಿದ್ಧಿ ಪಡೆದಿದೆ. ಗಂಧದ ಮೂರ್ತಿ ಮರದ ಮಂಟಪ, ಕಂಬ, ಗುಡಿಗೋಪುರಗಳ ವಿನ್ಯಾಸಗಳು, ಹಸ್ತಿದಂತದ ವಸ್ತುಗಳು, ಬೆಂಡಿನ ಹಾರ-ತುರಾಯಿಗಳು ಇಲ್ಲಿಯ ಕಲಾ ವಿಶೇಷಗಳು. ಇಲ್ಲಿಯ ಮನೆ-ಮಠಗಳಲ್ಲಿಯ ಬಾಗಿಲು ಹಾಗು ಕಂಬಗಳ ಕೆತ್ತನೆಯ ಕಲಾ ಕೌಶಲ್ಯವನ್ನು ಕಾಣಬೇಕು. ರಾಷ್ಟ್ರೀಯ ಪ್ರಶಸ್ತಿ ಪಡೆದ ಹಲವಾರು ಗುಡಿಗಾರರು ಇಲ್ಲಿದ್ದಾರೆ. ಪರದೇಶದ ಗಣ್ಯರಿಗೆ ಭಾತತ ಸರ್ಕಾರ ಕೊಡುವ ಕಾಣಿಕೆಯ ವಸ್ತುಗಳನ್ನು ಇಲ್ಲಿಯ ಗುಡಗಾರರೇ ನಿರ್ಮಿಸುತ್ತಾರೆ. ಇಲ್ಲಿಯ ಹಳೆಯ ಮನೆಗಳು ಗುಡಿಗೋಪುರಗಳು ಕೆಂಪುಕಾವಿನ ಗಚ್ಚಿನಿಂದ ಕೊರೆದ ಸುಂದರ ಆಕೃತಿಗಳಿಂದ ಅಲಂಕರಿಸಲ್ಪಟ್ಟಿವೆ. ಬಹುಕಾಲ ಬಾಳುವ ಕೆಂಪು ಕಾವಿನ ಬಣ್ಣದ ಈ ಸುಂದರ ಚಿತ್ರಕಲೆ ಉತ್ಕೃಷ್ಟವಾಗಿತ್ತು; ಈಗ ಈ ಕಲೆ ಮರೆಯಾಗುತ್ತಲಿದೆ.

ಇಲ್ಲಿಯ ಸುವರ್ಣಕಾರರು ಪರಪ್ರಾಂತದಲ್ಲಿಯೂ ಖ್ಯಾತರಾಗಿದ್ದಾರೆ. ಕಡವಾಡದ ಚಿನ್ನಾಭರಣಗಳು ಹೊರನಾಡಿಗೂ

ಠಪ್ಪಾಗುತ್ತಲಿವೆ. ಬೆತ್ತದ ಹಾಗು ಕತ್ತದ ವಸ್ತುಗಳನ್ನು ನಿರ್ಮಿಸುವ ಕಲೆ ಅನೇಕರಿಗೆ ಜೀವನಾಧಾರ ವ್ಯವಸಾಯ ವಾಗಿದೆ.

ಮುಂಡಗೋಡ ಸಮೀಪದ ಇಂದೂರಿನ ಬಳಿ ಟಿಬೇಟಿ-ಯನ್ನರ ನೆಲೆಯನ್ನು ಸ್ಥಾಪಿಸಲಾಗಿದೆ. ಅವರದೇ ಆದ ಸಾಂಸ್ಕೃತಿಕ ಹಾಡು ಕುಣಿತಗಳು ನೆಯ್ಗೆಯ ಕಲೆಗಳೂ ಈ ಜಿಲ್ಲೆಯನ್ನು ಸೇರಿವೆ. ಭಟಕಳದ ನವಾಯತರ ಹೆಣ್ಣುಗಳು ಪರದೆಯ ಹಿಂದೇ ಇರುವದರಿಂದ ಅವರ ಕಲೆಗಳನ್ನೂ ಗುರುತಿಸಬೇಕಾ-ಗಿದೆ. ಈ ಲೇಖಕನಿಗೆ ನವಾಯತರ ಹಾಗು ಟಿಬೇಟಿಯನ್‌ರ ಒಡನಾಟ ಬಾರದ್ದರಿಂದ ಈ ಜನಾಂಗದವರಲ್ಲಿದ್ದ ಕಲೆಗಳ ಬಗ್ಗೆ ಇನ್ನೂ ತಿಳಿಯಬೇಕಾಗಿದೆ. ಹುಡುಕಿದರೆ ಇನ್ನೂ ಕೆಲ ಕಲೆಗಳು ದೊರೆತಾವು.

೧೫. ಜನಪದ ಸಾಹಿತ್ಯ

ಅನೇಕ ಕಲೆಗಳಿಗೆ ಆಗರವಾದ ಈ ನೆಲದಲ್ಲಿ ಆ ಆ ಕಲೆ ಕೆಲೆಗಳಿಗೆ ಪೂರಕವಾದ ಜನಪದ ಸಾಹಿತ್ಯದ ಬೆಳೆಯೂ ಹುಲುಸಾಗಿದೆ. ಹಳ್ಳಿಗಳಲ್ಲಿ ಹಾಡುವ ಹಿರಿಯರಿದ್ದಾರೆ. ಈ ಹಾಡುಗಳನ್ನು ಸಂಗ್ರಹಿಸುವ ಕಾರ್ಯ ಈಗ ಸಾಕಷ್ಟಾಗಿದ್ದರೂ ಇನ್ನೂ ಸಂಗ್ರಹಿಸಬಹುದಾದದ್ದು ಬೇಕಷ್ಟಿದೆ. ದಿ॥ ವಿ. ವೆ. ತೊರ್ಕೆಯವರು ಮೊಟ್ಟಮೊದಲಿಗೆ "ಹಳ್ಳಿಯ ಹಾಡುಗಳು" ಎಂಬ ಸಂಗ್ರಹ ಪ್ರಕಟಿಸಿದ ನಂತರ ಮು. ಗ. ಶೆಟ್ಟಿ, ಜಿ. ಆರ್. ಹೆಗಡೆ, ಎಲ್.ಜಿ. ಭಟ, ಶ್ರೀಮತಿ ಶಾಂತಿ ನಾಯಕ ಮುಂತಾದ

ವರು ಜನಪದ ಸಾಹಿತ್ಯದ ಸಂಗ್ರಹದಲ್ಲಿ ದುಡಿದಿದ್ದಾರೆ. ಈ ದಿಶೆಯಲ್ಲಿ ಹಿರಿದಾದ ಕಾರ್ಯವೆಸಗಿದವರೆಂದರೆ ಡಾ॥ ಎನ್. ಆರ್. ನಾಯಕ ಹಾಗು ಡಾ॥ ಎಲ್. ಆರ್. ಹೆಗಡೆಯವರು. ಡಾ॥ ಎನ್. ಆರ್. ನಾಯಕ ಹಾಗು ಶ್ರೀಮತಿ ಶಾಂತಿ ನಾಯಕರು ಜನಪದ ಸಾಹಿತ್ಯಕ್ಕಾಗಿಯೇ ಪ್ರಕಟನಾ ಸಂಸ್ಥೆಯೊಂದನ್ನು ಪ್ರಾರಂಭಿಸಿದ್ದಾರೆ. ಉತ್ತರ ಕನ್ನಡದ ಜನಸಂಖ್ಯೆ ಕಡಿಮೆ. ಆದರೆ ಆ ಮಾರ್ಗದಿಂದ ಅಳೆದಾಗ ಕನ್ನಡ ಜನಪದ ಸಾಹಿತ್ಯದಲ್ಲಿ ಉತ್ತರ ಕನ್ನಡ ಜನಪದ ಸಾಹಿತ್ಯದ ಕಾಣಿಕೆ ಹಿರಿದಾದದ್ದೇ ಎನ್ನಬಹುದು.

ಜನಪದದ ಇಂದಿನ ಸ್ಥಿತಿಗತಿ : ಮನರಂಜನೆಗಾಗಿ. ಕೆಲಸದ ಬೇಸರ ಕಳೆಯುವದಕ್ಕಾಗಿ, ದೈವಾರಾಧನೆಗಾಗಿ, ನೀತಿ ಬೋಧನೆಗಾಗಿ ನಮ್ಮ ಹಳ್ಳಿಗರು ಸೃಷ್ಟಿಸಿದ ಸಾಹಿತ್ಯ–ಗೀತ–ಕುಣಿತಗಳು ತುಂಬಾ ಸತ್ವಯುತವಾಗಿದ್ದು ಪ್ರಭಾವಶಾಲಿಯಾಗಿವೆ. ಈ ಕಲೆಗಳು ಅರ್ಥಪೂರ್ಣ ಹಿನ್ನೆಲೆಯನ್ನು ಹೊಂದಿದ್ದು ವಿವೇಕಯುಕ್ತವಾಗಿ ಲೋಕದ ಹಿತವನ್ನೇ ವಿಶಾಲವಾದ ಗುರಿಯನ್ನಾಗಿಸಿಕೊಂಡು ಬೆಳೆದು ಬಂದಿವೆ. ಸುಂದರ ಹಾಗು ಚಿತ್ತಾಕರ್ಷಕವಾದ ಜನಪದ ಕಲಾವೃಕ್ಷ ಜನರ ನಡುವೆ, ಹಿರಿದಾಗಿ ಬೆಳೆದು ಆಳವಾಗಿ ಬೇರುಬಿಟ್ಟು ಸಮಾಜಕ್ಕೆ ನೆಮ್ಮದಿಯ ನೆರಳನ್ನು ನೀಡುತ್ತಲಿದೆ.

ಆಧುನಿಕ ಜಗತ್ತಿನ ಯಾಂತ್ರಿಕ ಸೌಲಭ್ಯ ಹಾಗು ಇತರ ಸುಲಭ ಸೌಕರ್ಯಗಳ ಪರಿಣಾಮವಾಗಿ ಬದುಕಿನ ರೀತಿ ಬೇರೆ

ಯಾದಾಗ ಇಂದು ಜನಪದ ತತ್ತರಿಸಿದೆ. ಆಧುಕತೆಯ ಬಿರು ಗಾಳಿಗೆ ಜನಪದ ಕಲಾಸಂಪತ್ತು ಬಲಿಯಾಗುತ್ತಲಿದೆ. ನಮ್ಮಲ್ಲಿದ್ದ ಜನಪದ ಕಲೆಗಳು ಒಂದಲ್ಲ, ಎರಡಲ್ಲ, ನೂರಾರು! ಅವು ಅಮೂಲ್ಯವಾದವು! ಅದ್ವಿತೀಯವಾದವು. ಹೀಗಿದ್ದು ಇಂಥ ಪರಿಸ್ಥಿತಿ ಏಕೆ ಬರಬೇಕು ? ಅಂಥವುಗಳಲ್ಲಿ ಜೀವಹಿಡಿದುಕೊಂಡು ಬದುಕಿರುವವೆಷ್ಟು ? ಹೀಗೇಕೆ ? ಉತ್ತರ ಎಲ್ಲರಿಗೂ ಗೊತ್ತು.

ಹಿಟ್ಟಿನ ಗಿರಣಿ ಬಂತು. ಬೀಸುವ ಕಲ್ಲು ಕೊಟ್ಟಿಗೆಯ ಕಲ್ಲಾಯಿತು. ಬಿಸುವದೇ ಇಲ್ಲದಾಗ ಬೀಸುವ ಹಾಡೆಲ್ಲಿ ? ಭತ್ತದ ಗಿರಣಿ ಬಂತು. ಒನಕೆ ಮೂಲೆಸೇರಿ ಕುಟ್ಟು ಹಿಡಿಯಿತು. ಹಾಡುವ ಗಂಟಲು ಕಟ್ಟಿಹೋಯಿತು. ಬಸ್ಸು ಬಂತು. ಎತ್ತಿನ ಗಾಡಿ ಪ್ರವಾಸ ನಿಂತಿತು. ಗಾಡಿಯವನ ಪದ ಕೇಳದಾಯ್ತು. ಮದುವೆಯ ಹಾಡಿಗೆ ಮೂರುತಾಸಿನ ಮದುವೆಯಲ್ಲಿ ಅವಕಾಶವೆಲ್ಲಿ ? ಅಲ್ಲದೆ ಸಿನೇಮಾ ಸಂಗೀತದ ಮೈಕಾಸುರನ ಕಿರಚುವಿಕೆಯಲ್ಲಿ ಮುತ್ತೈದೆಯ ಮದುವೆಯ ಹಾಡನ್ನು ಕೇಳುವವರಾರು ? ತೊಟ್ಟಿಲು ತೂಗುವ ಆಧುನಿಕ ತಾಯಿಯ ಬಾಯಲ್ಲಿ ಡಿಸ್ಕೋ ಸಂಗೀತ ಲಹರಿಯನ್ನು ಕೇಳುತ್ತ ನಿದ್ದೆಹೋಗುವ ಮಗುವು ಮುಂದೆ ಎಂಥ ಸಂಸ್ಕಾರವನ್ನು ಹೊಂದಬಹುದು ? ನಮ್ಮ ಹಬ್ಬ ಹರಿದಿನ ಸುಗ್ಗಿ ಸಮಾರಾಧನೆಗಳು ಕಡಿಮೆ ಆದಂತೆ ಅವುಗಳಿಗೆ ಸಂಬಂಧಿಸಿದ ಪದ, ಕುಣಿತ, ಕೋಲಾಟಗಳು ಮರೆಯಾಗುತ್ತವೆ. ಮನೆಯಲ್ಲಿ ಭಜನೆ, ಹಾಡುಗಳನ್ನು ಹೇಳುವವರಿಲ್ಲ. ಅಜ್ಜಿಕತೆ ಕೇಳುವವರಿಲ್ಲ ದಾಸರು, ಬುಡಬುಡಕೆಯವರು. ಬಸವನಾಡಿಸುವವರು ಮೊದಲಾದವರು

ತಮ್ಮ ವೃತ್ತಿಯನ್ನ ಅವಲಂಬಿಸಿ ಇಂದು ಬದುಕುವಂತಿಲ್ಲ. ಆದರಿಂದ ವೃತ್ತಿಗಾಧಾರವಾದ ಜನಪದ ಕಲೆಯೂ ಮರೆಯಾಗುವದು. ಇಂಥ ಪರಿಸ್ಥಿತಿಯಲ್ಲಿಯೂ ಸುಗ್ಗಿಕುಣಿತ, ಯಕ್ಷಗಾನ, ಸಣ್ಣಾಟ, ಗೀಗೀಮೇಳ, ಗುಮಟೆ-ಪಾಂಗು ಮೊದಲಾದವು ಜೀವಹಿಡಿದುಕೊಂಡಿರುವವೆಂದರೆ ಅವುಗಳಲ್ಲಿರುವ ಸ್ವಂತ ಸತ್ವದಿಂದ ಎನ್ನಬೇಕು.

ಹಳ್ಳಿಗಳಲ್ಲಿ ಉಳಿದಿರುವ ಜನಪದವನ್ನು ಉಳಿಸಿಕೊಳ್ಳುವದು ನಮ್ಮ ಆದ್ಯ ಕರ್ತವ್ಯವಾಗಿದೆ. ಜನಪದಕ್ಕೆ ಆಗಬಾರದಷ್ಟು ಹಾನಿ ಆಗಿ ಹೋಗಿದೆ. ಆದರೂ ಹುಡುಕಿದರೆ ಜನಪದ ಕಲೆಗಳ ತಾಯಿಬೇರು ಇನ್ನೂ ಹಸಿರಾಗಿದ್ದುದನ್ನು ಹಳ್ಳಿಗಳಲ್ಲಿ ಗುರುತಿಸಬಹುದು. ಜನಪದ ಕಲಾವೃಕ್ಷವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರಬೇಕಾದದ್ದು ಅಗತ್ಯವಾಗಿದೆ. ಎಲ್ಲ ಬಗೆಯು ಈ ಕಾರ್ಯದಲ್ಲಿ ಆಗಬೇಕು. ದಿನಕಳೆದರೆ ಪ್ರಯೋಜನವಿಲ್ಲ. ತಕ್ಷಣ ಅವುಗಳನ್ನು ಬದುಕಿಸಿಕೊಳ್ಳುವ ಕಾರ್ಯವಾಗದಿದ್ದರೆ ಕೋಟಿ ಕೋಟಿ ಹಣ ಸುರಿದರೂ ಸಿಗದ ಈ ಅಮೂಲ್ಯನಿಧಿ ಶಾಶ್ವತವಾಗಿ ನಮ್ಮಿಂದ ಮರೆಯಾಗುವದು.

ಪರದೇಶದಲ್ಲಿ ಜಾನಪದವನ್ನು ಪ್ರೇಮದಿಂದ ಬೆಳೆಸುತ್ತಾರೆ. ಅಮೇರಿಕೆಯಲ್ಲಿ ಜಾನಪದವು ವಿಶ್ವವಿದ್ಯಾಲಯದ ವಿಷಯಗಳಲ್ಲಿ ಒಂದಾಗಿ ಕಲಿಸಲ್ಪಡುತ್ತದೆ. ಜನಪದ ಸಾಹಿತ್ಯ, ಕಲೆ ಹಾಗು ಕಲಾವಸ್ತುಗಳನ್ನು ಕಂಡುಹಿಡಿದು ಉಳಿಸಿ ಬೆಳೆಸುವದಕ್ಕೆ ವಿಶೇಷ ಗಮನ ನೀಡಲಾಗುತ್ತದೆ. ರಷ್ಯಾದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಪ್ರಜೆಗಳಲ್ಲಿ ಜಾನಪದ ಮಾಧ್ಯಮ

ಗಳ ಮೂಲಕ ಮೂಡಿಸುತ್ತಿದ್ದಾರೆ. ನಾರ್ವೆಯಂತಹ ಸಣ್ಣ ದೇಶದಲ್ಲಿ ಜಿಲ್ಲೆಗೊಂದು ಜನಪದ ವಸ್ತು ಸಂಗ್ರಹಾಲಯಗಳಿವೆ. ಆದರೆ ನಮ್ಮ ನಾಡಿನಲ್ಲಿ ಏನಾಗಿದೆ ? ಆಗಬೇಕಾದದ್ದು ಅನೇಕವಿದೆ.

ಜಾನಪದ ಕಾಯಕಲ್ಪ : ಜನಪದ ಕಲೆಗಳ ಉಳುವಿಗೆ ಬೆಳವಣಿಗೆಗೆ ಈ ಕೆಲವು ಕಾರ್ಯಗಳನ್ನು ಕೈಕೊಳ್ಳುವದು ಅವಶ್ಯವಿದೆ.

ಜನಪದ ಕಲೆಗಳನ್ನು ಶೋಧಿಸಿ ಆದರ ವೈವಿಧ್ಯವನ್ನು ತಿಳಿಯುವದು, ಅದನ್ನು ಪುನರುಜ್ಜೀವನ ಗೊಳಿಸುವದು. ನಿರಂತರವಾಗಿ ಅದನ್ನು ಬೆಳೆಸಿಕೊಂಡು ಹೋಗಲು ಪ್ರದರ್ಶನ, ಸ್ಪರ್ಧೆ ನಡೆಸಿ ಪ್ರೋತ್ಸಾಹಿಸುವದು, ಕಲಾವಿದರಿಗೆ ಮಾಶಾಸನ ಕೊಡುವದು. ಅನುಭವಿ ಕಲಾವಿದರಿಂದ ಕಲಾವರ್ಗಗಳನ್ನು ನಡೆಸಿ ಯುವಕರನ್ನು ಈ ಕಲೆಗಳಲ್ಲಿ ತರಬೇತಿಗೊಳಿಸುವದು, ಶಿಕ್ಷಣದಲ್ಲಿ ಜನಪದ ಕಲೆಗಳನ್ನು ಸೇರಿಸುವದು, ತಜ್ಞರಿಂದ ಜಾನಪದ ವಿಚಾರಗೋಷ್ಠಿ ಪ್ರಚಾರ ಉಪನ್ಯಾಸಗಳನ್ನು ಮಾಡಿಸುವದು, ಸಿನೇಮಾ, ರೇಡಿಯೋ, ಟೆಲಿವಿಜನ್‌ಗಳಲ್ಲಿ ಜಾನಪದಕ್ಕೆ ಹೆಚ್ಚಿನ ಸ್ಥಾನ ಕೊಡುವದು. ಜನಪದ ಧ್ವನಿ ಮುದ್ರಣ, ಪತ್ರಿಕಾಪ್ರದರ್ಶನ, ಚಿತ್ರೀಕರಣ, ರೇಖಾ ಚಿತ್ರಣ, ಛಾಯಾಗ್ರಹಣ ಮಾಡುವದು, ಶಿಕ್ಷಣಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಸಾಹಿತ್ಯಪರಿಷತ್ತು, ಸರಕಾರದ ಅಕಾಡೆಮಿಗಳು ಜನಪದ ಕಲೆಗಳ ಏಳ್ಗೆಗೆ ಅವಿರತ ಪ್ರಯತ್ನ ನಡೆಸುವದು. ಇಂತಾದರೆ ಜನಪದ ಕಲೆಗಳು ಬದುಕಿ ಜನರ ಬದುಕನ್ನು ಬೆಳಗಿಸುವವು.

೧೬. ಗ್ರಂಥಋಣ

೧) "ಕಾರವಾರ ಜಿಲ್ಲೆಯ ಜನಪದ ಗೀತಗಳು"

—ಡಾ॥ ಎನ್. ಆರ್. ನಾಯಕ

೨) "ಕನ್ನಡ ಬಯಲಾಟ ಪರಂಪರೆ"

—ಡಾ॥ ಎನ್. ಆರ್. ನಾಯಕ

೩) "ಜನಪದ ಜೀವನ ಮತ್ತು ಕಲೆ"

—ಡಾ॥ ಎಲ್. ಆರ್. ಹೆಗಡೆ

೪) "ಕರ್ನಾಟಕ ಜನಪದ ಕಲೆಗಳು"

—ಶ್ರೀ ಗೊ. ರು. ಚೆನ್ನಬಸಪ್ಪನವರಿಂದ
ಸಂಪಾದಿತ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆ

೫) ಜನಪದ ಸಿಂಹಾವಲೋಕ

—ಡಾ॥ ಎನ್. ಆರ್. ನಾಯಕ

ಉಪನ್ಯಾಸ ಗ್ರಂಥಮಾಲೆಯ
ಕೆಲವು ಪ್ರಕಟನೆಗಳು

೧. ಜನಪದ ಗೀತಗಳಲ್ಲಿ ಶೃಂಗಾರ

—ಗುರುಪಾದ ಫಿರಾರಿ

೨. ಜಾನಪದದಲ್ಲಿ ಆರ್ಥಿಕ ವಿಚಾರಗಳು

—ಮಹಾಂತೇಶ ಎಸ್. ಗುಬ್ಬೇವಾಡ

೩. ಜನಪದ ಕಾವ್ಯದಲ್ಲಿ ಪ್ರಣಯ ಚಿತ್ರಣ

—ಬಸವರಾಜ ಸಬರದ

೪. ಜನಪದ ಕಾವ್ಯ

—ಗಿರಡ್ಡಿ ಗೋವಿಂದರಾಜ

೫. ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ

—ಬಸವರಾಜ ಮಲಶೆಟ್ಟಿ

೬. ಜನಪದ ಸಾಹಿತ್ಯದಲ್ಲಿ ನೀತಿ

—ಎಂ. ಎನ್. ವಾಲಿ

೭. ಜನಪದ ಸಾಹಿತ್ಯದಲ್ಲಿ ಹಾಸ್ಯ

—ಮೃತ್ಯುಂಜಯ ಹೊರಕೇರಿ

೮. ಜನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ

—ಲೀಲಾವತಿ ಬಿ. ತೋರಣಗಟ್ಟಿ

೯. ಜನಪದ ಕಾವ್ಯದಲ್ಲಿ ಜೀವನ ಧರ್ಮ

—ಬಿ. ಬಿ. ಮಲ್ಲಾಪೂರ

೧೦. ಜಾನಪದ ಕಥೆಗಳು

—ಎಲ್. ಆರ್. ಹೆಗಡೆ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ